ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ


ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 4 । ಏಪ್ರಿಲ್-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



ಮುಖ್ಯಮಂತ್ರಿ ಸಿದ್ದರಾಮಯ್ಯರವರೊಂದಿಗೆ
ಪತ್ತಿನ ಮಹಾಮಂಡಳದ ಅಧ್ಯಕ್ಷರ ಸೌಜನ್ಯದ ಭೇಟಿ-ಗೌರವ ಸಲ್ಲಿಕೆ




ಸಹಕಾರ ಸಚಿವ ಕೆ.ಎನ್. ರಾಜಣ್ಣರವರೊಂದಿಗೆ
ಪತ್ತಿನ ಮಹಾಮಂಡಳದ ಅಧ್ಯಕ್ಷರ ಸೌಜನ್ಯದ ಭೇಟಿ-ಗೌರವ ಸಲ್ಲಿಕೆ



ಮಾನ್ಯ ಅಬಕಾರಿ ಸಚಿವರಾದ ಆರ್.ಬಿ. ತಿಮ್ಮಾಪೂರ ರವರನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್‌ರವರು ಭೇಟಿ ಮಾಡಿ ಅಭಿನಂದಿಸಿದ ಸಂದರ್ಭ.



ಮಾಜಿ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ರವರನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್ ರವರು ಭೇಟಿ ಮಾಡಿ ಅಭಿನಂದಿಸಿದ ಸಂದರ್ಭ.



ವಿಧಾನ ಪರಿಷತ್ ಸದಸ್ಯರಾದ ಮಧು ಜಿ. ಮಾದೇಗೌಡ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್ ರವರು ಸನ್ಮಾನಿಸಿದರು. ಜೊತೆಯಲ್ಲಿ ಸಹಕಾರಿಗಳಾದ ಎಚ್.ಎಸ್. ರಾಮಮೂರ್ತಿ, ಯೂ.ಎಸ್. ರಮೇಶ್ ಹಾಗೂ ಜನತಾ ಬಜಾರ್ ನಿರ್ದೇಶಕರಾದ ಎನ್. ಮಂಜುನಾಥರವರು ಹಾಜರಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ


ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಎಸ್. ಚಂದ್ರಶೇಖರ್
ಅಧ್ಯಕ್ಷರು


ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು


ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು


ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಉಮೇಶ ಶಿ. ಬಾಳಿ
ನಿರ್ದೇಶಕರು


ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು


ವೈ. ಶ್ರೀನಿವಾಸಗೌಡ
ನಿರ್ದೇಶಕರು


ಜಗದೀಶ ಕಂದಿಕರೆ
ನಿರ್ದೇಶಕರು


ರಾಜೇಶ್ ಟಿ.
ನಿರ್ದೇಶಕರು


ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು


ಹೆಚ್. ಅಶೋಕ್
ನಿರ್ದೇಶಕರು


ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು


ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

SAHAKARA VARTHA PATHRIKE KANNADA MONTHLY
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



**ಎಸ್. ಚಂದ್ರಶೇಖರ್**
**ಅಧ್ಯಕ್ಷರು**

**ಸಹಕಾರ ಕ್ಷೇತ್ರ ಆರ್ಥಿಕ ಸ್ವಾವಲಂಬನೆಗೆ ಪೂರಕವಾದ ಕ್ಷೇತ್ರವಾಗಿದ್ದು 2025-26ರ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ 37 ಲಕ್ಷ ರೈತರಿಗೆ 28 ಸಾವಿರ ಕೋಟಿ ರೂಗಳ ಬೆಳೆ ಸಾಲದ ಗುರಿ ನೀಡಿರುವ ಮುಖ್ಯಮಂತ್ರಿಗಳು ಬಡ್ಡಿ ಸಹಾಯಧನಕ್ಕೆ ಹಣ ಮೀಸಲಿರಿಸಿ ರೈತ ಸಮುದಾಯಕ್ಕೆ ವಿಶೇಷವಾಗಿ ಆಹಾರ ಭದ್ರತೆಗೆ ಹೆಚ್ಚು ಒತ್ತು ನೀಡುತ್ತಿರುವುದು ಶ್ಲಾಘನೀಯ. ಇದರಿಂದ ಪ್ಯಾಕ್ಸ್‌ಗಳು ಕ್ರಿಯಾಶೀಲವಾಗಿರಲು ಸಾಧ್ಯವಾಗುವುದಲ್ಲದೆ ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಆದ್ಯತೆ ನೀಡಬೇಕಾದ ಅವಶ್ಯಕತೆಯೂ ಇದೆ.**

# ರಾಜ್ಯ ಬಜೆಟ್: ಹೆಚ್ಚಿನ ರೈತರಿಗೆ ಬೆಳೆ ಸಾಲ ಗುರಿ

ಕರ್ನಾಟಕ ರಾಜ್ಯದ 2025-26ನೇ ಸಾಲಿನ ರೂ. 4.09 ಲಕ್ಷ ಕೋಟಿ ಗಾತ್ರದ ಆಯವ್ಯಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದಾರೆ. ಬಜೆಟನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಮುಖ್ಯಮಂತ್ರಿ ಅವರು ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದ್ದಾರೆ ಎಂದು ಹೇಳಬಹುದಾಗಿದೆ.

ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಸಹಕಾರ, ಶಿಕ್ಷಣ, ಆರೋಗ್ಯ, ಕೈಗಾರಿಕೆ ಸೇರಿದಂತೆ ಮೂಲ ಸೌಕರ್ಯಗಳಿಗೂ 2025-26ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ಸಹಕಾರ ಕ್ಷೇತ್ರ ಆರ್ಥಿಕ ಸ್ವಾವಲಂಬನೆಗೆ ಪೂರಕವಾದ ಕ್ಷೇತ್ರವಾಗಿದ್ದು 2025-26ರ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ 37 ಲಕ್ಷ ರೈತರಿಗೆ ರೂ. 28 ಸಾವಿರ ಕೋಟಿಗಳ ಬೆಳೆ ಸಾಲದ ಗುರಿ ನೀಡಿರುವ ಮುಖ್ಯಮಂತ್ರಿ ಅವರು ಬಡ್ಡಿ ಸಹಾಯ ಧನಕ್ಕೆ ಹಣ ಮೀಸಲಿರಿಸಿ ರೈತ ಸಮುದಾಯಕ್ಕೆ ವಿಶೇಷವಾಗಿ ಆಹಾರ ಭದ್ರತೆಗೆ ಹೆಚ್ಚು ಒತ್ತು ನೀಡುತ್ತಿರುವುದು ಶ್ಲಾಘನೀಯ. ಇದರಿಂದ ಪ್ಯಾಕ್ಸ್‌ಗಳು ಕ್ರಿಯಾಶೀಲವಾಗಿರಲು ಸಾಧ್ಯವಾಗುವುದಲ್ಲದೆ ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಆದ್ಯತೆ ನೀಡಬೇಕಾದ ಅವಶ್ಯಕತೆಯೂ ಇದೆ.

ರೈತರು, ಸಹಕಾರಿಗಳ ಆರೋಗ್ಯ ರಕ್ಷಣೆಗೆ ಯಶಸ್ವಿನಿ ಯೋಜನೆಗೆ ಮರುಜೀವ ನೀಡಿರುವ ಮುಖ್ಯಮಂತ್ರಿಗಳು ಈ ಯೋಜನೆ ಅಡಿಯಲ್ಲಿ ಪ್ರತಿ ವರ್ಷ ಹೆಚ್ಚಿನ ಸಹಕಾರಿಗಳು ಮತ್ತು ಅವರ ಕುಟುಂಬದ ಸದಸ್ಯರುಗಳು ಕಡಿಮೆ ವಂತಿಗೆ ನೀಡಿ ಗುಣಮಟ್ಟ ಹೊರ ರೋಗಿ ಮತು ಶಸ್ತ್ರ ಚಿಕಿತ್ಸೆಗಳನ್ನು ಪಡೆಯಲು ವಿಶೇಷ ಆರ್ಥಿಕ ನೆರವು ನೀಡುತ್ತಿರುವುದು ಸಹಕಾರಿಗಳಲ್ಲಿ ಹರ್ಷ ತಂದಿದೆ.

ದೀರ್ಘಾವಧಿ ಸಾಲ ವ್ಯವಸ್ಥೆಯನ್ನು ಬಲಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ರವರು ಚಿಂತನ-ಮಂಥನ ನಡೆಸಿ ಡಿಸಿಸಿ ಬ್ಯಾಂಕ್, ಪಿಕಾರ್ಡ್ ಬ್ಯಾಂಕ್‌ಗಳ ಮಧ್ಯಮಾವಧಿ, ದೀರ್ಘಾವಧಿ ಸುಸ್ತಿ ಸಾಲಗಳ ಮೇಲಿನ ರೂ. 240 ಕೋಟಿಗಳ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ.

ಹೈನುಗಾರರು - ಕೃಷಿಕರನ್ನು ಆರ್ಥಿಕವಾಗಿ ಸದೃಢಗೊಳಿಸಲು ಸಹಕಾರಿಗಳು - ಸಾರ್ವಜನಿಕರು ಸಹಕಾರ ನೀಡುವುದು ಅಗತ್ಯವೂ ಹೌದು.

ಮುಂಬರುವ ದಿನಗಳಲ್ಲಿ ಸಹಕಾರ ಚಳುವಳಿ ಮತ್ತಷ್ಟು ಬಲಗೊಳ್ಳಲು ಸರ್ಕಾರದ ಪ್ರೋತ್ಸಾಹವೂ ಅಗತ್ಯವಾಗಿದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :
ಎಸ್. ಚಂದ್ರಶೇಖರ್

ಸಂಪಾದಕರು :
ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096
ದೂರವಾಣಿ ಸಂಖ್ಯೆ : 080–23564444 / 23464033 / 23464034
ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

# ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರೊಂದಿಗೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಸೌಜನ್ಯದ ಭೇಟಿ



**ಬೆಂಗಳೂರು :** ಇತ್ತೀಚೆಗೆ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ರವರನ್ನು ಸೌಜನ್ಯದ ಭೇಟಿ ಮಾಡಿ ಸಹಕಾರ ಇಲಾಖೆ ಹಾಗೂ ಇತರೆ ಪ್ರಮುಖ ವಿಚಾರಗಳ ಬಗ್ಗೆ ಚರ್ಚಿಸಿದರು. ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಪಿ. ಮಣಿವಣ್ಣನ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಹೆಚ್.ಎಂ ಕುಮಾರ್ ಹಾಗೂ ಸಹಕಾರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಜಿ.ಎಸ್. ರಮಣರೆಡ್ಡಿ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಎ.ಸಿ ದಿವಾಕರ್, ಮಾಧ್ಯಮ ಅಧಿಕಾರಿ ವೀರೇಶ್ ಅವರುಗಳು ಉಪಸ್ಥಿತರಿದ್ದರು.

**ಸುಭಾಷಿತ :** ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು. – ಪಿ. ಲಂಕೇಶ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು “ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು” ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 2025–26 ರಾಜ್ಯ ಬಜೆಟ್ ಗಾತ್ರ 4,09,549 ಕೋಟಿ ರೂ.

## 37 ಲಕ್ಷ ರೈತರಿಗೆ 28 ಸಾವಿರ ಕೋಟಿ ರೂ. ಕೃಷಿ ಸಾಲ ಗುರಿ

## ಡಿಸಿಸಿ ಬ್ಯಾಂಕ್, ಪೀಕಾರ್ಡ್ ಬ್ಯಾಂಕ್‌ಗಳ ಮಧ್ಯಮಾವಧಿ, ದೀರ್ಘಾವಧಿ ಸುಸ್ತಿ ಸಾಲಗಳ ಮೇಲಿನ 240 ಕೋಟಿ ರೂ. ಬಡ್ಡಿ ಮನ್ನಾ : ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2025–26ರ ಸಾಲಿನ ರೂ. 4.09 ಲಕ್ಷ ಕೋಟಿ ರೂ.ಗಳ ಆಯವ್ಯಯವನ್ನು ವಿಧಾನಸಭೆಯಲ್ಲಿ ಮಂಡಿಸಿದರು. ಈವರೆವಿಗೂ ಸಿದ್ದರಾಮಯ್ಯ ಅವರು ಒಟ್ಟು 16 ಬಜೆಟ್‌ಗಳನ್ನು ಮಂಡಿಸಿದ್ದು, ದಾಖಲೆಯನ್ನು ನಿರ್ಮಿಸಿದ್ದಾರೆ. ಕೃಷಿ, ತೋಟಗಾರಿಕೆ, ಸಹಕಾರ, ಆರೋಗ್ಯ, ನೀರಾವರಿ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ, ಜಲಸಂಪನ್ಮೂಲ, ಶಿಕ್ಷಣ, ಮೂಲಭೂತಸೌಕರ್ಯಗಳು ಸೇರಿದಂತೆ ಎಲ್ಲಾ ವಲಯಗಳ ಬೆಳವಣಿಗೆಗೆ ಈ ಬಜೆಟ್‌ನಲ್ಲಿ ಆದ್ಯತೆ ನೀಡಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಜಿಸಲು ಸರ್ಕಾರವು ಮಾಹಿತಿ ತಂತ್ರಜ್ಞಾನ, ಪ್ರವಾಸೋದ್ಯಮ, ಜೈವಿಕ ತಂತ್ರಜ್ಞಾನ ಸೇರಿದಂತೆ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಹಲವು ನೀತಿಗಳನ್ನು ಜಾರಿಗೆ ತಂದಿದೆ. ಈ ನೀತಿಗಳು ಮಾನವ ಸಂಪನ್ಮೂಲವನ್ನು ಸಮರ್ಥವಾಗಿ ಬಳಸುವುದರ ಜೊತೆಗೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಹೂಡಿಕೆಗಳನ್ನು ಉತ್ತೇಜಿಸಲಿವೆ. ಸರ್ಕಾರವು ಜಾರಿಗೆ ತಂದಿರುವ ಈ ನೀತಿಗಳಿಂದ ರಾಜ್ಯದಲ್ಲಿ ಅಂದಾಜು ಒಂದು ಲಕ್ಷ ಕೋಟಿ ರೂ. ಹೂಡಿಕೆಯನ್ನು ನಿರೀಕ್ಷಿಸಲಾಗಿದೆ. 2024–25ರ ಡಿಸೆಂಬರ್ ಅಂತ್ಯದವರೆಗೆ ರಾಜ್ಯ ಸರ್ಕಾರವು ಆರ್ಥಿಕ ಬೆಳವಣಿಗೆಗೆ ಪ್ರಾಶಸ್ತ್ಯ ನೀಡಿದ್ದರ ಪರಿಣಾಮವಾಗಿ 4.4 ಬಿಲಿಯನ್ ಡಾಲರ್ ಮೌಲ್ಯದ ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವ ಮೂಲಕ ದೇಶದಲ್ಲಿಯೇ 3ನೇ ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2025–26ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳ ಮೂಲಕ 37 ಲಕ್ಷ ರೈತರಿಗೆ 28 ಸಾವಿರ ಕೋಟಿ ರೂ.ಗಳ ಕೃಷಿ ಸಾಲ ನೀಡುವುದಾಗಿ ತಿಳಿಸಿದ್ದಾರೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಅಭಿವೃದ್ಧಿ ಸಹಕಾರ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಮೇಲಿನ ಸುಸ್ತಿ ಸಾಲಗಳ ಬಾಕಿ 240 ಕೋಟಿ ರೂ.ಗಳ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕೇಂದ್ರ ಪುರಸ್ಕೃತ ಗಣಕೀಕರಣ ಯೋಜನೆಯಡಿ 93 ಕೋಟಿ ರೂ.ಗಳಷ್ಟು ಬಿಡುಗಡೆ ಮಾಡಿ, ರಾಜ್ಯದಲ್ಲಿ 110 ಸಂಘಗಳ ಗಣಕೀಕರಣವನ್ನು ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದ ಅವರು ಪ್ರಸಕ್ತ ಸಾಲಿನಲ್ಲಿ, 3,000 ಸಂಘಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಉದ್ದೇಶಿಸಲಾಗಿದೆ ಎಂದರು.



ರೈತರ ಆದಾಯ ಸರಿದೂಗಿಸಲು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಪ್ರತಿ ಕ್ವಿಂಟಾಲ್‌ಗೆ 7.550 ರೂ. ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿ ಪ್ರೋತ್ಸಾಹಧನ 450 ರೂ.ಗಳಂತೆ ಒಟ್ಟು 138 ಕೋಟಿ ರೂ. ನೀಡಲು ತೀರ್ಮಾನಿಸಲಾಗಿದೆ. ಇದರಿಂದ ತೊಗರಿ ಬೆಳೆಯುವ ಪ್ರಮುಖ ಜಿಲ್ಲೆಗಳಾದ ಕಲಬುರಗಿ. ಬೀದರ್, ಯಾದಗಿರಿ. ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಕೋಲಾರ, ಚಿತ್ರದುರ್ಗ ಹಾಗೂ ಚಿಕ್ಕಬಳ್ಳಾಪುರ ಭಾಗದ ರೈತರಿಗೆ ಅನುಕೂಲವಾಗಲಿದೆ ಎಂದರು.

ಸಹಕಾರ ಇಲಾಖೆಯಲ್ಲಿ ಕಾರ್ಯಕ್ಷಮತೆ. ಪಾರದರ್ಶಕತೆ ಹಾಗೂ ಜನಸ್ನೇಹಿ ಸೇವೆಗಳನ್ನು ನೀಡಲು ಹಲವು ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿರುವ ಅವರು ರಾಜ್ಯದ ಎಲ್ಲಾ ನೊಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘಗಳ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ವತಿಯಿಂದ ಆನ್‌ಲೈನ್‌ನಲ್ಲಿ ಅಳವಡಿಸಲಾಗುವುದು ಹಾಗೆಯೇ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವ್ಯವಹಾರವನ್ನು



ತಡೆಯಲು ಸಹಾಯವಾಣಿಯನ್ನು ಪ್ರಾರಂಭಿಸಲಾಗುವುದು ಹಾಗೂ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ವರದಿಗಳನ್ನು ಡಿಜಿಟಲೀಕರಣಗೊಳಿಸಲಾಗುವುದು ಎಂದರು.

ಸಹಕಾರ ಸಚಿವಾಲಯ ವ್ಯಾಪ್ತಿಯಡಿ ಬರುವ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಪೂರ್ಣಗೊಂಡಿರುವ ಉಗ್ರಾಣಗಳ ನಿರ್ಮಾಣ ಹಾಗೂ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲು 376 ಕೋಟಿ ರೂ. ಸಹಾಯಾನುದಾನವನ್ನು ಹಿಂದಿನ ಆಯವ್ಯಯದಲ್ಲಿ ಘೋಷಿಸಿದ್ದ ಸಿದ್ದರಾಮಯ್ಯ ಅವರು ಅದರಂತೆ, ಈಗಾಗಲೇ 329 ಕೋಟಿ ರೂ. ಬಿಡುಗಡೆಗೊಳಿಸಿದ್ದು, ಪ್ರಸಕ್ತ ಸಾಲಿನಲ್ಲಿ ಬಾಕಿ ಇರುವ 47 ಕೋಟಿ ರೂ. ಮೊತ್ತವನ್ನು ಒದಗಿಸಲಾಗುವುದಾಗಿ ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪರವಾನಿಗೆ ಪಡೆದು ಕಾರ್ಯನಿರ್ವಹಿಸುತ್ತಿರುವ ಶ್ರಮಿಕರು ಮೃತರಾದಾಗ ಅವರ ವಾರಸುದಾರರಿಗೆ ಒಂದು ಲಕ್ಷ ರೂ. ವಿಮಾ ಮೊತ್ತವನ್ನು ನೀಡಲಾಗುತ್ತಿದ್ದು, ಸದರಿ ವಿಮಾ ಮೊತ್ತವನ್ನು ಐದು ಲಕ್ಷ ರೂ.ಗಳಿಗೆ ಹೆಚ್ಚಿಸಿದ್ದಾರೆ.

ಬೆಂಗಳೂರಿನಲ್ಲಿರುವ ಮಾರುಕಟ್ಟೆ ಸಮಿತಿಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿರುವುದರಿಂದ ಬೆಂಗಳೂರಿನ ಹೊರವಲಯದಲ್ಲಿ ಹೊಸ Satellite Market ಅನ್ನು ಸ್ಥಾಪಿಸಲಾಗುವುದು. ಕೊಪ್ಪಳ ಜಿಲ್ಲೆಯ ಬೂದುಗುಂಪ ಗ್ರಾಮದಲ್ಲಿ ಕುರಿ ಮತ್ತು ಮೇಕೆ ಮಾರುಕಟ್ಟೆಯನ್ನು KKRDB ವತಿಯಿಂದ 25 ಕೋಟಿ ರೂ. ವೆಚ್ಚದಲ್ಲಿ ಅಗತ್ಯ ಮೂಲಸೌಲಭ್ಯಗಳೊಂದಿಗೆ ಸ್ಥಾಪಿಸಲಾಗುವುದಾಗಿ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೈನುಗಾರಿಕೆಯನ್ನು ಉತ್ತೇಜಿಸಲು 10 ಕೋಟಿ ರೂ. ಅನುದಾನವನ್ನು ಪ್ರಥಮ ಹಂತದಲ್ಲಿ ನೀಡಲಾಗುವುದು ಎಂದು ತಿಳಿಸಿರುವ ಮುಖ್ಯಮಂತ್ರಿಯವರು ಕಲಬುರಗಿಯಲ್ಲಿ ನೂತನ ಮೆಗಾ ಡೈರಿಯನ್ನು ಪ್ರಾರಂಭಿಸಲು KKRDB ವತಿಯಿಂದ 50 ಕೋಟಿ ರೂ. ಅನುದಾನ ಒದಗಿಸಲಾಗುವುದು ಎಂದು ವಿವರಿಸಿದ್ದಾರೆ.

ಕಲ್ಯಾಣ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮಂಡಳಿ ವತಿಯಿಂದ ಕಲಬುರಗಿಯಲ್ಲಿ ಪ್ರಾದೇಶಿಕ ಸಹಕಾರ ಭವನವನ್ನು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವುದಾಗಿ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಕಲ್ಯಾಣ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮಂಡಳಿ ಸಹಯೋಗದಿಂದ ಗ್ರಾಮೀಣ ಉಗ್ರಾಣಗಳನ್ನು 60 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು ಎಂದರು.

ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೆ ಅನುವಾಗುವಂತೆ ಬೆಂಗಳೂರಿನಲ್ಲಿ ಸುಸಜ್ಜಿತ ಕುರಿ ಮತ್ತು ಮೇಕೆ ಮಾರುಕಟ್ಟೆಯನ್ನು ಪ್ರಾರಂಭಿಸಲಾಗುವುದು. ಚಿಕ್ಕಬಳ್ಳಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಅಂತಾರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆಯನ್ನು ಹಾಗೂ ಕೆ.ಜಿ.ಎಫ್.ನಲ್ಲಿ ರೈತರ ಆಧುನಿಕ ಮಾರುಕಟ್ಟೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು ಎಂದು ತಿಳಿಸಿದ್ದಾರೆ.

### ನ್ಯಾಯಬೆಲೆ ಅಂಗಡಿಗಳ ವಿತರಣೆ

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಮೂಲಕ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಪ್ರಾರಂಭಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯದವರಿಗೆ ಮತ್ತು ಸಹಕಾರ ಸಂಘಗಳಿಗೆ ಹಂಚಿಕೆಯಲ್ಲಿ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

### ಮಹಿಳೆಯರಿಗೆ ಅಕ್ಕ ಸಹಕಾರ ಸಂಘ

ಕೌಶಲ್ಯಾಭಿವೃದ್ಧಿ ಇಲಾಖೆಯ ಮೂಲಕ ಜಾರಿಗೆ ತರುವ




ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಜೀವನೋಪಾಯ ಚಟುವಟಿಕೆ ಕೈಗೊಳ್ಳಲು ತ್ವರಿತ ಸಾಲಸೌಲಭ್ಯ ಒದಗಿಸಿ, ಉಳಿತಾಯ ಮತ್ತು ಉದ್ಯಮಶೀಲತೆ ಹೆಚ್ಚಿಸುವ ಉದ್ದೇಶದಿಂದ ರಾಜ್ಯಮಟ್ಟದಲ್ಲಿ ಅಕ್ಕ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸುವುದಾಗಿ ಘೋಷಿಸಿರುವ ಮುಖ್ಯಮಂತ್ರಿಗಳು "ಗೃಹಲಕ್ಷ್ಮಿ" ಯೋಜನೆಯ ಯಜಮಾನಿಯರನ್ನು ಸ್ವಸಹಾಯ ಗುಂಪುಗಳ ಸದಸ್ಯರುಗಳನ್ನಾಗಿಸಿ, ರಾಜ್ಯಮಟ್ಟದ ಅಕ್ಕ ಕೋ-ಆಪರೇಟಿವ್ ಸೊಸೈಟಿ ವ್ಯಾಪ್ತಿಗೆ ತರುವುದಾಗಿ ಹೇಳಿದ್ದಾರೆ.

ಮಹಿಳಾ ಸಬಲೀಕರಣಕ್ಕಾಗಿ ಗ್ರಾಮ ಪಂಚಾಯಿತಿ ಸ್ವಸಹಾಯ ಸಂಘಗಳ ಸಹಭಾಗಿತ್ವದಲ್ಲಿ ವಿವಿಧ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಯೋಜನೆ ರೂಪಿಸಿರುವ ಮುಖ್ಯಮಂತ್ರಿಗಳು ಜಿಲ್ಲಾ ಮತ್ತು ತಾಲ್ಲೂಕು ಕಚೇರಿ ಆವರಣಗಳಲ್ಲಿ "ಅಕ್ಕ ಕೆಫೆ ಮತ್ತು ಕ್ಯಾಂಟೀನ್" ಸ್ಥಾಪಿಸಲಾಗುವುದು ಎಂದರು. ಶಾಲೆ, ಅಂಗನವಾಡಿ, ವಸತಿ ನಿಲಯಗಳಿಗೆ ಮೊಟ್ಟೆ ಮತ್ತು ತರಕಾರಿ ಪೂರೈಸಲು ಸ್ವಸಹಾಯ ಸಂಘಗಳ "ಕಿರು ಉದ್ಯಮ"ಗಳನ್ನು ಪ್ರೋತ್ಸಾಹಿಸಲಾಗುವುದು. ಹಾಗೆಯೇ ಸ್ವಸಹಾಯ ಸಂಘಗಳ ಮೂಲಕ ಪ್ರತಿ ಜಿಲ್ಲೆಯಲ್ಲಿ ಒಂದು "ಸಮುದಾಯ ಪ್ರವಾಸಿ ಯೋಜನೆ" ಯನ್ನು ಅನುಷ್ಠಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

### ಬೆಂಗಳೂರು ಅಭಿವೃದ್ಧಿಗೆ ಒತ್ತು

ಬೆಂಗಳೂರಿನ ಜನಸಂಖ್ಯೆ, ಪರಿಸರ ನಿರ್ವಹಣೆ, ಆರೋಗ್ಯ, ಮೂಲಭೂತ ಸೌಕರ್ಯಗಳಿಗೆ ಹೆಚ್ಚು ಒತ್ತು ನೀಡಿರುವ ಮುಖ್ಯಮಂತ್ರಿಗಳು ಗರಿಷ್ಠ ಪ್ರಮಾಣದ ಅನುದಾನವನ್ನು ಘೋಷಿಸಿದ್ದಾರೆ.

ತೆರಿಗೆ ಸಂಗ್ರಹಣೆಯಲ್ಲಿ ಪ್ರಮುಖವಾಗಿ ವಾಣಿಜ್ಯ ತೆರಿಗೆ ಇಲಾಖೆಯ ರಾಜಸ್ವ ಸಂಗ್ರಹಣೆಯ ಗುರಿಯನ್ನು 1.2 ಲಕ್ಷ ಕೋಟಿಗಳಿಗೆ ಅಬಕಾರಿ ಇಲಾಖೆಯಿಂದ 40 ಸಾವಿರ ಕೋಟಿ ರೂ. ಗಳನ್ನು, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ 28 ಸಾವಿರ ಕೋಟಿ ರೂ.ಗಳನ್ನು, ಮೋಟಾರು ವಾಹನ ಇಲಾಖೆಯಿಂದ 15 ಸಾವಿರ ಕೋಟಿ ರೂ.ಗಳನ್ನು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ 9 ಸಾವಿರ ಕೋಟಿ ರೂ.ಗಳ ತೆರಿಗೆಗಳ ಗುರಿಯನ್ನು ನಿಗದಿಪಡಿಸಿದ್ದಾರೆ. ರಾಜ್ಯದಲ್ಲಿ ಸುಮಾರು 2 ಲಕ್ಷ ಉದ್ಯೋಗ ಸೃಜಿಸುವ ಉದ್ದೇಶದಿಂದ ಜವಳಿ-ನೀತಿ 2025-30 ಆರಂಭ ಹಾಗೂ ರಾಜ್ಯದಾದ್ಯಂತ ಜವಳಿ ಪಾರ್ಕ್ ಸ್ಥಾಪನೆ. ಕಾರ್ಕಳ, ರಾಣೆಬೆನ್ನೂರು, ರಾಯಚೂರು, ಕಡೂರು ಹಾಗೂ ಚಿಕ್ಕಮಗಳೂರಿನಲ್ಲಿ ಪಿಪಿಪಿ ಮಾದರಿಯಲ್ಲಿ ಮತ್ತು ಕೇಂದ್ರದ ಸಹಯೋಗದಿಂದ ಕಲಬುರಗಿಯಲ್ಲಿ ಮಿತ್ರ ಜವಳಿ ಪಾರ್ಕ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಇ.ವಿ ವಾಹನಗಳ ತಯಾರಿಕೆ ಹಾಗೂ ಬಳಕೆಯ ಉತ್ತೇಜನಕ್ಕೆ ಬೆಂಗಳೂರಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಇ.ವಿ ಕ್ಲಸ್ಟರ್ ನಿರ್ಮಾಣ ಮಾಡಲಾಗುವುದು ಎಂದು ವಿವರಿಸಿದ್ದಾರೆ.

ರಾಜ್ಯದ ಅಭಿವೃದ್ಧಿಗೆ ಒತ್ತು ನೀಡಿರುವ ಮುಖ್ಯಮಂತ್ರಿಗಳು ಪ್ರಾದೇಶಿಕ ಅಸಮಾನತೆಯ ನಿವಾರಣೆ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಬಲವರ್ಧನೆ, ಸಾರಿಗೆಯ ಸುಗಮ ವ್ಯವಸ್ಥೆ, ಕಾನೂನು ಮತ್ತು ಸುವ್ಯವಸ್ಥೆ ನಿಭಾವಣೆಗೆ ಹೊಸ ಕಾರ್ಯತಂತ್ರಗಳಿಗೆ ಹೆಚ್ಚು ಆದ್ಯತೆ, ಕಲ್ಯಾಣ ಇಲಾಖೆಗಳ ಮೂಲಕ ಅಸಹಾಯಕರ ಸಬಲೀಕರಣಕ್ಕೆ ಈ ಆಯವ್ಯಯದಲ್ಲಿ ಒತ್ತು ನೀಡಿದ್ದಾರೆ. ನಾಡು ಕಟ್ಟುವ ಪ್ರಕ್ರಿಯೆಯಲ್ಲಿ ಸುಸ್ಥಿರ ಅಭಿವೃದ್ಧಿ ಇಟ್ಟಿಗೆಗಳನ್ನು ಸುವ್ಯವಸ್ಥಿತವಾಗಿ ಜೋಡಿಸುವ ಆಶಯಕ್ಕೆ ಈ ಆಯವ್ಯಯ ಬಲ ನೀಡುತ್ತದೆ ಎಂದು ಆಶಿಸಲಾಗಿದೆ.

| ಇಲಾಖಾವಾರು ಹಂಚಿಕೆ | |
|---|---|
| ಪಶುಸಂಗೋಪನೆ ಮತ್ತು ಮೀನುಗಾರಿಕೆ | 3977 ಕೋಟಿ ರೂ. |
| ಕೃಷಿ ಮತ್ತು ತೋಟಗಾರಿಕೆ | 7145 ಕೋಟಿ ರೂ. |
| ಆಹಾರ ಮತ್ತು ನಾಗರೀಕ ಸರಬರಾಜು | 8275 ಕೋಟಿ ರೂ. |
| ಲೋಕೋಪಯೋಗಿ | 11841 ಕೋಟಿ ರೂ. |
| ಸಮಾಜ ಕಲ್ಯಾಣ | 16955 ಕೋಟಿ ರೂ. |
| ಶಿಕ್ಷಣ | 45286 ಕೋಟಿ ರೂ. |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ | 34955 ಕೋಟಿ ರೂ. |
| ಇಂಧನ | 26896 ಕೋಟಿ ರೂ. |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 26735 ಕೋಟಿ ರೂ. |
| ನೀರಾವರಿ | 22181 ಕೋಟಿ ರೂ. |
| ನಗರಾಭಿವೃದ್ಧಿ ಮತ್ತು ವಸತಿ | 21405 ಕೋಟಿ ರೂ. |
| ಒಳಾಡಳಿತ ಮತ್ತು ಸಾರಿಗೆ | 20625 ಕೋಟಿ ರೂ. |
| ಕಂದಾಯ | 17201 ಕೋಟಿ ರೂ. |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 17473 ಕೋಟಿ ರೂ. |

## ಕರ್ನಾಟಕದಲ್ಲಿ ಅಂತಾರಾಷ್ಟ್ರೀಯ ಸಹಕಾರ ವರ್ಷ 2025 ಆಚರಣೆ,

# ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ






**ಬೆಂಗಳೂರು :** ಸಹಕಾರ ಕ್ಷೇತ್ರದ ಸಾಧನೆ– ವೈಫಲ್ಯಗಳ ಕುರಿತು ಚಿಂತನ ಮಂಥನ ನಡೆಸಲು ಪ್ರತಿ ವರ್ಷವು ಪ್ರಮುಖ ಧ್ಯೇಯದೊಂದಿಗೆ ಜುಲೈ ಮೊದಲ ಶನಿವಾರದಂದು ಅಂತಾರಾಷ್ಟ್ರೀಯ ಸಹಕಾರ ವರ್ಷವನ್ನು ಆಚರಿಸಲಾಗುತ್ತದೆ. ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಮಾರ್ಗದರ್ಶನದಲ್ಲಿ ಈ ವರ್ಷ **"ಸಹಕಾರ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸಬಲ್ಲವು"** ಎಂಬ ಧ್ಯೇಯದೊಂದಿಗೆ ಸಹಕಾರ ವರ್ಷ ಆಚರಿಸಲಾಗುತ್ತಿದೆ. ಈ ವರ್ಷ ಕೇಂದ್ರ ಸಹಕಾರ ಸಚಿವಾಲಯದ ಮಾರ್ಗದರ್ಶನದಲ್ಲಿ ಅಂತಾರಾಷ್ಟ್ರೀಯ ಸಹಕಾರ ವರ್ಷವನ್ನು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ "ಅಂತಾರಾಷ್ಟ್ರೀಯ ಸಹಕಾರ ವರ್ಷ ರಾಜ್ಯಮಟ್ಟದ ಉನ್ನತ ಸಮಿತಿ"ಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಸಹಕಾರಿ ಸಚಿವರು, ಕೃಷಿ ಮತ್ತು ರೈತ ಕಲ್ಯಾಣ ಸಚಿವರು, ಗ್ರಾಹಕ ಮತ್ತು ಆಹಾರ, ನಾಗರೀಕ ಸರಬರಾಜು ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಪೌರಾಡಳಿತ ಹಾಗೂ ನಗರಾಭಿವೃದ್ಧಿ ಇಲಾಖೆ ಸಚಿವರುಗಳು ಸದಸ್ಯರಾಗಿರುತ್ತಾರೆ.

ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಈ ಸಮಿತಿಯ ಸಂಚಾಲಕರಾಗಿರುತ್ತಾರೆ. ಜತೆಗೆ ಸಮಿತಿಯಲ್ಲಿ ಸಹಕಾರ ಇಲಾಖೆ, ಕೃಷಿ, ಆಹಾರ ಮತ್ತು ನಾಗರೀಕ ಸರಬರಾಜು, ಪಶುಸಂಗೋಪನೆ, ಹಣಕಾಸು, ಗ್ರಾಮೀಣಾಭಿವೃದ್ಧಿ, ಪೌರಾಡಳಿತ ಹಾಗೂ ನಗರಾಭಿವೃದ್ಧಿ, ಮೀನುಗಾರಿಕಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಇರುತ್ತಾರೆ.

# ಸಹಕಾರ ಇಲಾಖಾಧಿಕಾರಿಗಳ ವರ್ಗಾವಣೆ – ಪ್ರಭಾರ ಸ್ವೀಕಾರ



**ಲಕ್ಷ್ಮೀಪತಯ್ಯ**

ಸಹಕಾರ ಸಂಘಗಳ ಅಪರ ನಿಬಂಧಕರಾದ ಲಕ್ಷ್ಮೀಪತಯ್ಯ ಅವರು ಸಹಕಾರ ಸಂಘಗಳ ನಿಬಂಧಕರ ಕಚೇರಿಯ ವಸತಿ ಮತ್ತು ಇತರೆ ವಿಭಾಗದ ಸಹಕಾರ ಸಂಘಗಳ ಅಪರ ನಿಬಂಧಕರಾಗಿ ಪ್ರಭಾರ ವಹಿಸಿಕೊಂಡಿದ್ದಾರೆ.



**ಅಶ್ವತ್ಥನಾರಾಯಣ**


ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಅಶ್ವತ್ಥನಾರಾಯಣ ಅವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಕಾರ್ಯದರ್ಶಿಗಳಾಗಿ ಪ್ರಭಾರ ವಹಿಸಿಕೊಂಡಿದ್ದಾರೆ.



**ಡಾ. ಜಿ. ಉಮೇಶ್**

ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಡಾ. ಜಿ. ಉಮೇಶ್ ಅವರು ಬೆಂಗಳೂರು ಪ್ರಾಂತ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರಾಗಿ ಪ್ರಭಾರ ವಹಿಸಿಕೊಂಡಿದ್ದಾರೆ.

## ಸಹಕಾರಿ ಟ್ಯಾಕ್ಸಿ ಶೀಘ್ರ ರಸ್ತೆಗೆ



**ಹೊಸದಿಲ್ಲಿ :** ಆ್ಯಪ್ ಆಧರಿತ ಟ್ಯಾಕ್ಸಿ ಸೇವೆ ಓಲಾ ಮತ್ತು ಉಬರ್ ರೀತಿಯಲ್ಲೇ ಸಹಕಾರಿ ಟ್ಯಾಕ್ಸಿ ಸೇವೆಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಲೋಕಸಭೆಯಲ್ಲಿ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ" ಸ್ಥಾಪನೆಗೆ ಸಂಬಂಧಿಸಿದ ವಿಧೇಯಕದ ಮೇಲಿನ ಚರ್ಚೆಗೆ ಉತ್ತರಿಸಿದ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ. "ಸಹಕಾರಿ ಟ್ಯಾಕ್ಸಿ ವೇದಿಕೆಯಿಂದ ಬರುವ ಲಾಭವು ಯಾವುದೇ ಶ್ರೀಮಂತ ವ್ಯಕ್ತಿ ಕಿಸೆಗೆ ಸೇರುವುದಿಲ್ಲ. ಬದಲಿಗೆ ಅದರ ಲಾಭವು ನೇರವಾಗಿ ಟ್ಯಾಕ್ಸಿ ಚಾಲಕರಿಗೆ ತಲುಪಲಿದೆ" ಎಂದು ಅವರು ಸದನಕ್ಕೆ ಮಾಹಿತಿ ನೀಡಿದ್ದಾರೆ. ಅಲ್ಲದೆ, ಸದ್ಯದಲ್ಲೇ ಸಹಕಾರಿ ವಿಮಾ ಕಂಪನಿಯನ್ನು ಪ್ರಾರಂಭಿಸಲಾಗುವುದು ಎಂದು ಅಮಿತ್ ಶಾ ತಿಳಿಸಿದ್ದಾರೆ.

## ಸಹಕಾರ ಸಂಘಗಳ ನಿಗಾಕ್ಕೆ ಪೋರ್ಟಲ್ ರೂಪಿಸಿ

### ಇ-ಮೇಲ್ ಎಸ್.ಎಂ.ಎಸ್, ವಾಟ್ಸಪ್ ಮೂಲಕ ನೋಟೀಸ್ ಕಳುಹಿಸಲು ಹೈಕೋರ್ಟ್ ಸೂಚನೆ

**ಬೆಂಗಳೂರು :** ರಾಜ್ಯ ಸಹಕಾರ ಕಾಯ್ದೆ ಮತ್ತು ಅದರ ರಚನೆಯಾಗಿರುವ ಸಂಘಗಳು ನಿಯಮಗಳನ್ನು ಸರಿಯಾಗಿ ಪಾಲನೆ ಮಾಡುತ್ತಿವೆಯೋ ಇಲ್ಲವೋ ಎಂಬ ಬಗ್ಗೆ ಪರಿಶೀಲನೆ ನಡೆಸಲು ಕಾಮನ್ ಪೋರ್ಟಲ್ ರೂಪಿಸುವಂತೆ ಹೈಕೋರ್ಟ್, ರಾಜ್ಯ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿ ನಿರ್ದೇಶನ ನೀಡಿದೆ.

ಬೆಂಗಳೂರಿನ ನಾಗರಬಾವಿಯ ಎಂ.ಆರ್. ರುಕ್ಮಾಂಗದ ವಿಶ್ವಪ್ರಜ್ಞಾ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ವಿರುದ್ಧ ಸಲ್ಲಿಸಿದ ಅರ್ಜಿ ಪರಿಶೀಲಿಸಿದ ನ್ಯಾಯಮೂರ್ತಿ. ಸೂರಜ್ ಗೋವಿಂದರಾಜ ಅವರಿದ್ದ ಏಕ ಸದಸ್ಯಪೀಠ ಈ ಆದೇಶ ನೀಡಿದೆ. ಅಲ್ಲದೆ ಹೈಕೋರ್ಟ್ ಆದೇಶ ಪಾಲನೆ ಕುರಿತು ನಾಲ್ಕು ವಾರಗಳಲ್ಲಿ ರಾಜ್ಯ ಸರ್ಕಾರ ವಿಸ್ತೃತ ಯೋಜನಾ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

**ಪೋರ್ಟಲ್ ರೂಪಿಸಿ :** ವಾದ ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ "ಸಹಕಾರ ಸಂಘಗಳು ಸಹಕಾರ ಕಾಯ್ದೆ ಮತ್ತು ಅದರ ನಿಯಮಗಳನ್ನು ಪಾಲನೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ಸ್ ಮತ್ತು ಇ-ಆಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಒಗ್ಗೂಡಿ ಕಾಮನ್ ಪೋರ್ಟಲ್ ರೂಪಿಸಲು ಇದು ಸಕಾಲ" ಎಂದು ಹೇಳಿದೆ. "ಅಲ್ಲದೆ ಆ ಪೋರ್ಟಲ್‌ನಲ್ಲಿ ಎಲ್ಲಾ ಸಹಕಾರಿ ಸಂಘಗಳ ದತ್ತಾಂಶ ಅಪ್ಲೋಡ್ ಮಾಡಬೇಕು. ಯಾವ ಯಾವ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆ ಎನ್ನುವ ವಿವರ ಒಳಗೊಂಡಿರಬೇಕು. ಸಹಕಾರ ಸಂಘಗಳು ಕಾಯ್ದೆ ಮತ್ತು ನಿಯಮಗಳಲ್ಲಿ ಎಲ್ಲಾ ಅಗತ್ಯ ಮಾಹಿತಿ ಒಳಗೊಂಡಿರಬೇಕು. ಆ ಪೋರ್ಟಲ್ ಆಕ್ಸೆಸ್ ಮಾಡುವ ಅಧಿಕಾರ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಅವರಿಗೆ ಇರಬೇಕು. ಇದರಿಂದ ಎಲ್ಲಾ ಸಂಘಗಳ ಮೇಲೆ ನಿಗಾ ಇಡಲು ಇದು ಸಹಕಾರಿಯಾಗಲಿದೆ" ಎಂದು ನ್ಯಾಯಪೀಠ ಆದೇಶಿಸಿದೆ.

"ಸಹಕಾರ ಸಂಘಗಳು ಯಾವುದಾದರೂ ನಿಯಮಗಳನ್ನು ಪಾಲನೆ ಮಾಡದಿದ್ದಲ್ಲಿ ಅಂತಹ ಸಂಘಗಳಿಗೆ ಆಟೋಮ್ಯಾಟಿಕ್ ರಿಮೈಂಡರ್‌ಗಳನ್ನು ಕಳುಹಿಸಲು ಪೋರ್ಟಲ್ ಸಹಕಾರಿಯಾಗಲಿದೆ" ಎಂದು ಹೇಳಿರುವ ನ್ಯಾಯಾಲಯ ಎಲ್ಲಾ ರೀತಿಯಲ್ಲೂ ಪೋರ್ಟಲ್‌ನಿಂದ ಸಹಕಾರ ಸಂಘಗಳಿಗೆ ಸಾಕಷ್ಟು ಅನುಕೂಲಗಳಾಗಲಿವೆ. ಒಂದು ವೇಳೆ ಸಹಕಾರ ಸಂಘಗಳು ನಿಯಮಗಳ ಅನುಸಾರ ನಡೆಯದಿದ್ದರೆ ಅಂತಹ ಸಂಘಗಳ ವಿರುದ್ಧ ತಕ್ಷಣ ಕ್ರಮ ಜರಗಿಸಲೂ ಸಾಧ್ಯವಾಗಲಿದೆ" ಎಂದು ಹೇಳಿದೆ. "ಹಾಲಿ ಸಹಕಾರ ಸಂಘಗಳ ಕಾಯ್ದೆ ನಿಯಮ 13ರ ಪ್ರಕಾರ ಸಹಕಾರ ಸಂಘಗಳಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ನೋಟಿಸ್ ಕಳುಹಿಸುವುದು ಕಷ್ಟಕರ. ಎಷ್ಟೋ ಬಾರಿ ನೋಟೀಸ್ ಕಳುಹಿಸಲಾಗದು ಅಥವಾ ತಡವಾಗಿ ತಲುಪುತ್ತವೆ ಮತ್ತು ಅದರಿಂದ ಸಹಕಾರ ಸಂಘಗಳಿಗೆ ಆರ್ಥಿಕ ಹೊರೆ ತಗುಲಿ ಸಂಕಷ್ಟಕ್ಕೆ ಒಳಗಾಗುತ್ತವೆ. ಆದರೆ ಪೋರ್ಟಲ್ ಮೂಲಕ ಸಂಘಗಳು ಆಧುನಿಕ ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಇ ಮೇಲ್ ಎಸ್.ಎಂ.ಎಸ್, ವಾಟ್ಸಪ್ ಮೂಲಕವೂ ನೋಟೀಸ್‌ಗಳನ್ನು ಕಳುಹಿಸುವುದು ಅತ್ಯಂತ ಸುಲಭ ವಿಧಾನವಾಗಿದೆ" ಎಂದು ನ್ಯಾಯಪೀಠ ತಿಳಿಸಿದೆ

ಅರ್ಜಿ ಮಾನ್ಯ ಮಾಡಿರುವ ನ್ಯಾಯಾಲಯ "ಅರ್ಜಿದಾರರನ್ನು ಅನರ್ಹ ಮತದಾರರೆಂದು ಪ್ರಕಟಿಸಿದ್ದ ಪ್ರತಿವಾದಿ ಸಂಘದ ಆದೇಶವನ್ನು ರದ್ದುಗೊಳಿಸಿದೆ. ಅಲ್ಲದೆ ಅರ್ಜಿದಾರರು ಈಗಾಗಲೇ ಮತದಾನ ಮಾಡಿರುವುದರಿಂದ ಪ್ರತಿವಾದಿಗಳು ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಬೇಕು" ಎಂದು ಆದೇಶ ನೀಡಿದೆ.

# ಹಾಲು ಒಕ್ಕೂಟಗಳಲ್ಲಿ ಅನಗತ್ಯ ವೆಚ್ಚ ಕಡಿವಾಣಕ್ಕೆ ಕ್ರಮ : ಕೆ.ಎನ್. ರಾಜಣ್ಣ



**ಬೆಂಗಳೂರು:** ನಿರ್ವಹಣಾ ವೆಚ್ಚ ಹೆಚ್ಚಾಗಿರುವ ಒಕ್ಕೂಟಗಳಲ್ಲಿ ಮೂರರಿಂದ ಆರು ತಿಂಗಳಲ್ಲಿ ವೆಚ್ಚ ಕಡಿತ ಮಾಡಿಕೊಳ್ಳುವಂತೆ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆಯೇ ನೀಡಿದ್ದಾರೆ. ಆ ಹಿನ್ನೆಲೆಯಲ್ಲಿ ಅನಗತ್ಯ ವೆಚ್ಚ ವೆಚ್ಚಕ್ಕೆ ಕಡಿವಾಣ ಹಾಕಲು ಕ್ರಮವಹಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ.

ವಿಕಾಸ ಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇತ್ತೀಚೆಗೆ ಮುಖ್ಯಮಂತ್ರಿಗಳು ಎಲ್ಲಾ ಒಕ್ಕೂಟಗಳ ಅಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಿದರು. ಮೂರು ಒಕ್ಕೂಟಗಳು ನಷ್ಟದಲ್ಲಿದ್ದು ವಿಜಯಪುರ ಒಕ್ಕೂಟವು ಅತಿ ಹೆಚ್ಚು ಅಂದರೆ 20.48 ಕೋಟಿ ರೂ ನಷ್ಟದಲ್ಲಿದೆ. ವಿನಾಕಾರಣ ಸಿಬ್ಬಂದಿಯನ್ನು ಹೊರಗುತ್ತಿಗೆ ದಿನಗೂಲಿ ಅಥವಾ ಬೇರೆ ರೀತಿಯಲ್ಲಿ ನೇಮಕಾತಿ ಮಾಡಿದ್ದರೆ ಅದನ್ನೆಲ್ಲ ರದ್ದು ಪಡಿಸುವಂತೆಯೂ ಸಿಎಂ ಸೂಚಿಸಿದ್ದಾರೆ. ನಿರ್ವಹಣಾ ವೆಚ್ಚವು ಒಟ್ಟು ವಹಿವಾಟಿನ ಶೇ.2ರಷ್ಟು ಮೀರುವಂತಿಲ್ಲ. ಅದರಂತೆ 3ರಿಂದ 6 ತಿಂಗಳಲ್ಲಿ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಲು ಸಿಎಂ ಸೂಚಿಸಿದ್ದಾರೆ ಎಂದು ಹೇಳಿದರು. "ಹಿಂದಿನ ಬಿಜೆಪಿ ಸರ್ಕಾರವು ಹೈನುಗಾರರಿಗೆ ಏಳು ಸಾವಿರ ಕೋಟಿ ರೂ ಪ್ರೋತ್ಸಾಹ ಧನ ಬಾಕಿ ಉಳಿಸಿ ಹೋಗಿತ್ತು. ಬಳಿಕ ಸಿಎಂ ಸಿದ್ದರಾಮಯ್ಯ ಅವರು ಪ್ರೋತ್ಸಾಹ ಧನ ಬಿಡುಗಡೆಗೆ ಕ್ರಮವಹಿಸಿದ್ದಾರೆ. ನಾಲ್ಕು ದಿನದ ಹಿಂದೆ 200 ಕೋಟಿ ರೂ ಬಿಡುಗಡೆಯಾಗಿದೆ. ಬಾಕಿ ಪ್ರೋತ್ಸಾಹ ಧನ ಬಿಡುಗಡೆಗೂ ಪಶು ಸಂಗೋಪನಾ ಸಚಿವರು ಕೆಎಂಎಫ್ ಅಧ್ಯಕ್ಷರು ಒತ್ತಡ ಹೇರಿದ್ದು ಶೀಘ್ರವೇ ಬಾಕಿ ಬಿಡುಗಡೆ ಮಾಡುವುದಾಗಿ ಸಿಎಂ ಭರವಸೆ ನೀಡಿದ್ದಾರೆ" ಎಂದು ತಿಳಿಸಿದರು.

## ಬ್ಯಾಂಕಿಂಗ್ ವಿಧೇಯಕಕ್ಕೆ ಅಂಗೀಕಾರ

**ಹೊಸದಿಲ್ಲಿ :** ಬ್ಯಾಂಕ್ ಖಾತೆದಾರರು ನಾಲ್ವರು ನಾಮಿನಿಗಳನ್ನು ಹೊಂದಲು ಅವಕಾಶ ಕಲ್ಪಿಸುವ ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ವಿಧೇಯಕ–2024ನ್ನು ಸಂಸತ್ ಬುಧವಾರ ಅಂಗೀಕರಿಸಿದೆ. ವಿಧೇಯಕದ ಮೇಲಿನ ಚರ್ಚೆ ವೇಳೆಯಲ್ಲಿ ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ "ಎನ್‌ಪಿಎ ತೀವ್ರವಾಗಿ ಕಡಿಮೆಯಾಗಿದೆ. ಉದ್ದೇಶಪೂರ್ವಕ ಸುಸ್ತಿದಾರರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ. ಕಳೆದ ಐದು ವರ್ಷಗಳಲ್ಲಿ ಜಾರಿ ನಿರ್ದೇಶನಾಲಯ ಬ್ಯಾಂಕ್ ವಂಚನೆಗೆ ಸಂಬಂಧಿಸಿದಂತೆ 11 ಪ್ರಕರಣಗಳನ್ನು ಕೈಗೆತ್ತಿಕೊಂಡಿದೆ" ಎಂದರು. ರೈಟ್ ಆಫ್ ಅನ್ನು ಸಾಲ ಮನ್ನಾ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ಸಾಲ ವಸೂಲಾತಿಗೆ ಬ್ಯಾಂಕುಗಳು ಹೆಚ್ಚಿನ ಪ್ರಯತ್ನ ನಡೆಸುತ್ತವೆ ಎಂದು ತಿಳಿಸಿದರು. "ಕಳೆದ ಹಣಕಾಸು ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಸುಮಾರು 1.41 ಲಕ್ಷ ಕೋಟಿ ರೂಗಳ ಗರಿಷ್ಠ ಲಾಭವನ್ನು ದಾಖಲಿಸಿವೆ ಎಂದು ಅವರು ಸದನಕ್ಕೆ ಮಾಹಿತಿ ನೀಡಿದರು ಮತ್ತು 2025–26ರಲ್ಲಿ ಲಾಭದ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ" ಎಂಬ ಭರವಸೆ ನೀಡಿದರು.

## ಆಯ್ಕೆ



**ಡಾ॥ ಗಂಗಹನುಮೇಗೌಡ ಬಿ.ಎಂ.**
ಅಧ್ಯಕ್ಷರು



**ಕೃಷ್ಣ ಹೆಚ್.ಬಿ.**
ಉಪಾಧ್ಯಕ್ಷರು

ಶ್ರೀನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ನೂತನ ಅಧ್ಯಕ್ಷರಾಗಿ ಡಾ॥ ಗಂಗಹನುಮೇಗೌಡ ಬಿ.ಎಂ., ಉಪಾಧ್ಯಕ್ಷರಾಗಿ ಕೃಷ್ಣ ಹೆಚ್.ಬಿ. ಇವರುಗಳು ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ನಾರಾಯಣಸ್ವಾಮಿ ಬಿ.ಆರ್., ಡಿ. ಚನ್ನಯ್ಯ, ಚಂದ್ರಶೇಖರ್ ಎಂ., ವಿಜಯ ಎಸ್., ಮುದ್ದುರಾಜ್ ಹೆಚ್.ಎಂ., ಹರಿಕೃಷ್ಣ ಟಿ.ವಿ., ಸುಧಾಕರ್ ಎಂ., ರೇಖಾ ಎಸ್, ದೇವರಾಜ್ ಎ.ಬಿ, ನಾಗರಾಜು ಹೆಚ್, ಪುಟ್ಟರಾಮಯ್ಯ ಹೆಚ್.ಆರ್. ಇವರುಗಳು ಆಯ್ಕೆಯಾಗಿದ್ದಾರೆ.



**ಬಿ.ಎಸ್. ಶ್ರೀನಾಥ್**
ಅಧ್ಯಕ್ಷರು



**ಡಿ.ಎಸ್. ವಿಶ್ವನಾಥ್**
ಉಪಾಧ್ಯಕ್ಷರು

**ಮೈಸೂರು :** ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ಸಂಘದ ಅಧ್ಯಕ್ಷರಾಗಿ ಬಿ.ಎಸ್. ಶ್ರೀನಾಥ್ ಮತ್ತು ಉಪಾಧ್ಯಕ್ಷರಾಗಿ ಡಿ.ಎಸ್. ವಿಶ್ವನಾಥ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಇದರ ಚುನಾವಣೆಯ ಪ್ರಯುಕ್ತ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಕರೆದಿದ್ದ ಸಭೆಯಲ್ಲಿ 2 ಜಿಲ್ಲೆಗಳ ಎಲ್ಲಾ ಶಾಸಕರು ಹಾಗೂ ಜಿಲ್ಲಾ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರು ಭಾಗವಹಿಸಿದ ಸಂದರ್ಭ.



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಅಧ್ಯಕ್ಷರಾಗಿ ಆಯ್ಕೆಯಾದ ಎಸ್. ಚಂದ್ರಶೇಖರ್ ರವರಿಗೆ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಕೋ–ಆಪರೇಟಿವ್ ಸೊಸೈಟಿಯ ನಿರ್ದೇಶಕರುಗಳಾದ ಬಾಲಾಜಿ ಶೇಖರ್, ಕೆ.ಹನುಮಂತೇಗೌಡ. ಪ್ರದೀಪ್ ಬಿ. ರಾಮಾರಾಧ್ಯ ಹಾಗೂ ಯು.ಎಸ್. ರಮೇಶ್, ಎನ್. ಮಂಜುನಾಥ್ ಅಭಿನಂದನೆ ಸಲ್ಲಿಸಿದರು.




ಸುಳ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರುಗಳನ್ನು ಸನ್ಮಾನಿಸಿಲಾಯಿತು

# ವಿಶ್ವ ಮಾನವ ಸಂದೇಶದ ಮೂಲಕ ಸಮಸಮಾಜದ ಸಂದೇಶ ಸಾರಿದ ಅಣ್ಣ ಬಸವಣ್ಣ



ಹನ್ನೆರಡನೆಯ ಶತಮಾನ ವಿಶ್ವದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಕರ್ನಾಟಕದಲ್ಲಿ ಬಸವಾದಿ ಶರಣರ ದಿವ್ಯ ಮಾರ್ಗದರ್ಶನದಲ್ಲಿ ಮಾನವ ಕಲ್ಯಾಣ ದಿಸೆಯಲ್ಲಿ ನಡೆದ ಸಮರ, ಕ್ರಾಂತಿ ವಿಶ್ವದ ಯಾವುದೇ ಭಾಗದಲ್ಲಿ ಒಮ್ಮೆಲೇ ನಡೆದ ನಿದರ್ಶನಗಳೇ ಇಲ್ಲ. ವಿಶ್ವದಲ್ಲಿ ಕಾಲಕಾಲಕ್ಕೆ ಅನೇಕ ರೀತಿಯ ಕ್ರಾಂತಿಗಳಾಗಿವೆ. ಆ ಯಾವ ಕ್ರಾಂತಿಯೂ ಈ ಶರಣರು ಮಾಡಿದಂತಹ ಸಮಗ್ರ ಕ್ರಾಂತಿಯನ್ನು ಹೋಲಲು ಸಾಧ್ಯವಿಲ್ಲ. ಇದಕ್ಕೆ ಮೂಲ ಕಾರಣ ಮಾನವ ಸಮುದಾಯದ ಎಲ್ಲಾ ಕ್ಷೇತ್ರಗಳ ಸದಾಶಯಗಳಿಗೆ ಸ್ಪಂದಿಸುವಂತಹ ಕ್ರಾಂತಿಗೆ ನಾಂದಿ ಹಾಡಿದವರು ಬಸವಾದಿ ಶರಣರು.

ಬಸವಣ್ಣನವರ ಕಾಲಘಟ್ಟದಲ್ಲಿ ಯಾವೆಲ್ಲ ಅನಿಷ್ಟ ಪದ್ಧತಿಗಳು ಮಾನವ ಸಮಾಜವನ್ನು ಕಾಡುತ್ತಿದ್ದವು ಆ ಅನಿಷ್ಟಗಳೆಲ್ಲವೂ ಇಂದು ಹೊಸ ರೂಪ ತಳೆದು ಆಧುನಿಕ ಮಾನವ ಸಮಾಜಕ್ಕೆ ಒಕ್ಕರಿಸಿದ್ದು ಮನುಷ್ಯ ಮನುಷ್ಯರ ನಡುವಿನ ಶಾಂತಿ ಸಹಬಾಳ್ವೆ, ಸಹೋದರತ್ವ ಕೊಂಡಿಯನ್ನೆ ತುಂಡರಿಸುವ ಕಾರ್ಯದಲ್ಲಿ ನಿರತವಾಗಿವೆ.

ಮನುಷ್ಯ ಆಧುನಿಕತೆಯನ್ನು ಮೈಗೂಡಿಸಿಕೊಂಡು, ವಿಶ್ವವೆ ಒಂದು ಹಳ್ಳಿಯಾಗಿ ಅಭಿವೃದ್ಧಿ ಹೊಂದಿರುವ ಈ ಕಾಲಘಟ್ಟದಲ್ಲಿ ಧರ್ಮ,ಜಾತಿ, ಭಾಷೆ, ಬಣ್ಣಗಳ ಹೆಸರಿನಲ್ಲಿ ದಿನ ನಿತ್ಯ ಕಚ್ಚಾಡುತ್ತ, ಯಾವುದನ್ನು ತಿನ್ನಬೇಕು, ಯಾವ ಬಟ್ಟೆ ದರಿಸಬೇಕು, ಯಾರನ್ನು ಮದುವೆಯಾಗ ಬೇಕು, ಯಾರೊಂದಿಗೆ ವ್ಯಾಪಾರ ಮಾಡಬೇಕು, ವಾಹನ ಚಾಲಕರು ಯಾರಾಗಿರಬೇಕು ಎಂದು ದಿನ ನಿತ್ಯ ವ್ಯಕ್ತಿಯ ವೈಯಕ್ತಿಕ ಜೀವನದಲ್ಲಿ ಕೈಯಾಡಿಸಿ ಸಮಾಜದ ಶಾಂತಿ ಕದಡುವ ಬೆಳವಣಿಗೆಗಳು ನಡೆಯುತ್ತಿರುವ ಈ ದಿನಗಳಲ್ಲಿ ಜಾತಿ ವರ್ಗರಹಿತ ವಿಶ್ವಮಾನವ ಸಂದೇಶ ಸಾರಿದ ಬಸವಣ್ಣನವರ ಸಮ ಸಮಾಜದ ತತ್ವ ಸಿದ್ಧಾಂತಗಳು ಎಂದಿಗಿಂತ ಹೆಚ್ಚಾಗಿ ನಾವು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ.

ಬಸವಣ್ಣನವರು ಜಾತಿ ಜಾತಿಗಳ, ಧರ್ಮ–ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಮಾನವ ಸಂಘರ್ಷವನ್ನು ಕುರಿತು ನೊಂದು ನುಡಿದ ಈ ವಚನ ಇಡೀ ವಿಶ್ವಕ್ಕೆ ನೀಡಿದ ಒಂದು ದಿವ್ಯ ಸಂದೇಶವಾಗಿದೆ.

"ಇವನಾರವ, ಇವನಾರವ, ಇವನಾರವ ನೆಂದೆನಿಸದಿರಯ್ಯಾ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯಾ ಕೂಡಲ ಸಂಗಮ ದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ".

"ಮನುಷ್ಯನಾಗಿ ಹುಟ್ಟಿದ ಮೇಲೆ ಎಲ್ಲರೂ ಸರಿ ಸಮಾನರೇ ಎಲ್ಲರೂ ನಮ್ಮವರೆ "ಇವನು ಯಾರು ಇವನು ಯಾರು" ಎಂದು ಕೇಳುವುದು ಸರಿಯಲ್ಲ. ಇವನು ನಮ್ಮವನು ಇವನು ನಮ್ಮವನು ಎಂದು ಪ್ರೀತಿಯಿಂದ ಅಪ್ಪಿಕೊಳ್ಳಬೇಕೆಂಬ ಮಾನವ ಭ್ರಾತೃತ್ವದ ದಿವ್ಯ ಸಂದೇಶ ನೀಡಿದ ಬಸವಣ್ಣನವರು, ಮಾದಾರ ಚನ್ನಯ್ಯನನ್ನು ತನ್ನ ಅಪ್ಪನೆಂದು, ಡೋಹರ ಕಕ್ಕಯ್ಯನನ್ನು ತನ್ನ ದೊಡ್ಡಪ್ಪನೆಂದು, ಕಿನ್ನರ ಬೊಮ್ಮಯ್ಯನನ್ನು ತನ್ನ ಅಣ್ಣನೆಂದು ಸಂಬೋಧಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಹಾಗೂ ಸ್ವಾಭಿಮಾನದ ಶಕ್ತಿಯನ್ನು ತುಂಬಿದ ಹಿರಿಮೆ ಅಣ್ಣ ಬಸವಣ್ಣನವರಿಗೆ ಸಲ್ಲುತ್ತದೆ. ದಲಿತರ ಬಗ್ಗೆ ಅವರಿಗಿದ್ದ ಸಹಜ ಪ್ರೀತಿ ಹಾಗೂ ಗೌರವಕ್ಕೆಅವರ ಈ ಅಭಿಮಾನದ ಮಾತು ಸಾಕ್ಷಿಯಾಗಿದೆ.

ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ನೈತಿಕ ಹಾಗೂ ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರ ಕ್ರಾಂತಿಕಾರರ ವಿಚಾರಧಾರೆ ಅತ್ಯಂತ ಪ್ರಖರವಾಗಿ ಮಾನವೀಯ ನೆಲೆಯಲ್ಲಿ ಹರಿದುಬಂದದ್ದು ಒಂದು ವಿಸ್ಮಯವೇ ಸರಿ. ಇದಕ್ಕೆ ಮೂಲ ಪ್ರೇರಣೆಯಾದದ್ದು ಬಸವಾದಿ ಶರಣರ ದಾರ್ಶನಿಕ ಚಿಂತನೆಗಳು. ಅವರು ಪ್ರತಿಪಾದಿಸಿದ ಮಾನವೀಯ ಜೀವನ ಮೌಲ್ಯಗಳು. ವಿಶಿಷ್ಟವಾದ ವೈಚಾರಿಕ ನೆಲೆಯಲ್ಲಿ ಮಾನವ ಬದುಕನ್ನು ಕಂಡಂತಹ ಅವರ ವಿಶಿಷ್ಟವಾದ ಧೋರಣೆಗಳು, ಸಮಗ್ರ ಕ್ರಾಂತಿಯ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಅವರ ಉದಾತ್ತ ಜೀವನ

ಸಿದ್ಧಾಂತಗಳು.ಬಸವಣ್ಣನವರ ಮಹಾನ್ ದಾರ್ಶನಿಕ ಮಾರ್ಗದರ್ಶನದಲ್ಲಿ ನಾಡಿನ, ರಾಷ್ಟ್ರದ ಮೂಲೆ ಮೂಲೆಗಳಿಂದಲೂ ಶರಣ ತತ್ವಗಳಿಂದ ಆಕರ್ಷಿತರಾಗಿ ನೂರಾರು ಶರಣರು ಏಕಕಾಲಕ್ಕೆ ಬಂದದ್ದು ಒಂದು ಐತಿಹಾಸಿಕ ಘಟನೆ. ಶರಣರ ಆಗಮನದಿಂದ ಕಲ್ಯಾಣದಲ್ಲಿ ನಡೆದಂತಹ ಒಂದು ವಿನೂತನವಾದ ಸಮರ ಕ್ರಾಂತಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಬಸವಣ್ಣನವರ ದರ್ಶನದಿಂದ ನನ್ನ ಬದುಕು ಸಾರ್ಥಕವಾಯಿತು ಎನ್ನುವ ಅಲ್ಲಮಪ್ರಭುಗಳ ಈ ವಚನವು ಬಸವಣ್ಣನವರ ದಿವ್ಯ ವ್ಯಕ್ತಿತ್ವವಕ್ಕೆ ಹಿಡಿದ ಕನ್ನಡಿಯಂತಿದೆ."ಕಲ್ಯಾಣವೆಂಬ ಪ್ರಣತಿಯಲ್ಲಿ, ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯ ಅಸಂಖ್ಯಾತ ಭಕ್ತಗಣಂಗಳು ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ? ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೆ? ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ, ಸಿದ್ದರಾಮಯ್ಯ"

**ಅನುಭವ ಮಂಟಪ:** ಬಸವಾದಿ ಶರಣರು ತಮ್ಮ ಎಲ್ಲಾ ಶರಣ ಸಮೂಹದೊಂದಿಗೆ ಅನುಭಾವದ ಬಗ್ಗೆ ಚಿಂತನೆ, ವಿಚಾರ ವಿನಿಮಯ ಮತ್ತು ಸಂವಾದಕ್ಕಾಗಿ ನಿರ್ಮಿಸಿಕೊಂಡಿದ್ದ ಒಂದು ಚಿಂತನೆಯ ವೇದಿಕೆಯೇ ಅನುಭವ ಮಂಟಪ, ಇದೊಂದು ಜ್ಞಾನದ ಪೀಠ. ಕಾಯಕ ಭೇದವಿಲ್ಲದೆ, ಲಿಂಗಭೇದವಿಲ್ಲದೆ, ಜಾತ್ಯತೀತ ನೆಲೆಯಲ್ಲಿ ಶರಣರೆಲ್ಲರೂ ಕೂಡಿ ತಮ್ಮ ತಮ್ಮ ದಿನ ನಿತ್ಯದ ಕಾಯಕ ಮತ್ತು ಬದುಕಿನ ಅನುಭಾವದ ಸಂವೇದನೆಯ ಹಿನ್ನಲೆಯಲ್ಲಿ ನಿರ್ಭೀತವಾಗಿ ನಡೆಸುತ್ತಿದ್ದ ಶರಣರ ಆಧ್ಯಾತ್ಮಿಕ ಚಿಂತನೆಗಳ ಒಂದು ಪ್ರಜಾಸತ್ತಾತ್ಮಕ ಕೇಂದ್ರವೇ ಅನುಭವ ಮಂಟಪ. ಈ ಅನುಭವ ಮಂಟಪವೇ ವಿಶ್ವದ ಮೊದಲ ಪಾರ್ಲಿಮೆಂಟ್ ಎಂದು ವಿಮರ್ಶಕರಿಂದ ಬಣ್ಣಿಸಲಾಗಿದೆ.

**ಜೀವನ ಸಂವಿಧಾನ:** ಬಸವಣ್ಣನವರ ಕ್ರಾಂತಿಗೆ ಮೂಲ ಆಧಾರವಾದಂತಹ ಈ ವಚನ ಇಡೀ ವಿಶ್ವ ಸಮುದಾಯಕ್ಕೆ ನೀಡಿದಂತಹ ಒಂದು ಸಾಮಾಜಿಕ ನೀತಿ ಸಂಹಿತೆ. ಜಗತ್ತಿನ ಮನುಕುಲಕ್ಕೆ ನೀಡಿದಂತಹ ಜೀವನ ಸಂವಿಧಾನ, ಮಾನವ ಸಂವಿಧಾನ."ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡತನ್ನ ಬಣ್ಣಿಸಬೇಡ, ಇದಿರಹಳಿಯಲು ಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ"

**ಸ್ತ್ರೀ ಸಮಾನತೆ:** ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹೆಣ್ಣಿನ ಬಗ್ಗೆ ಅತ್ಯಂತ ಅಭಿಮಾನದಿಂದ ದನಿ ಎತ್ತಿದ್ದಾರೆ. ಹೆಣ್ಣಿನ ಬಗ್ಗೆ ಭಾರತೀಯ ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ ಕೀಳುಭಾವನೆಯನ್ನು, ಅಸಮಾನತೆಯನ್ನು ಬಸವಣ್ಣನವರ ಈ ಚಳವಳಿ ತೊಡೆದು ಹಾಕಿದೆ. ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಯ ಸಮಾನ ಎಂದು ಸಾರುವ ಮೂಲಕ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಹಿರಿಮೆ ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ.ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ, ಶೋಷಣೆಗಳನ್ನು ಕಂಡು ವಚನಕಾರರು ಕಿಡಿಕಾರಿ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಪ್ರಯತ್ನ ನಡೆಸಿದ್ದಾರೆ. ಪ್ರಾಪಂಚಿಕ ಹಾಗೂ ಪರಮಾರ್ಥಿಕ ಎರಡು ನೆಲೆಗಳಲ್ಲಿಯೂ ಹೆಣ್ಣನ್ನು ಸಮಾನ ಅವಕಾಶಗಳೊಂದಿಗೆ ಪರಿಗಣಿಸಿದ್ದಾರೆ. ಈ ವಚನ ಚಳವಳಿಯಲ್ಲಿ ಸುಮಾರು 35 ವಚನಕಾರ್ತಿಯರು ಸುಮಾರು 1351 ವಚನಗಳನ್ನು ಬರೆದಿರುವುದಾಗಿ ಡಾ. ವೀರಣ್ಣ ರಾಜೂರ ಅವರು ತಿಳಿಸುತ್ತಾರೆ. 12ನೆಯ ಶತಮಾನದಲ್ಲಿ ಒಮ್ಮೆಗೇ ಇಷ್ಟು ಜನ ಮಹಿಳೆಯರು ಸಾಹಿತ್ಯ ಕ್ಷಿತಿಜದ ಮೇಲೆ ಕಾಣಿಸಿಕೊಂಡದ್ದು ಪರಮ ಆಶ್ಚರ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ. ಬಸವಣ್ಣನವರ ನಾಯಕತ್ವದಲ್ಲಿ ನಡೆದ ಚಳವಳಿಯು ಹೆಣ್ಣಿನ ಸ್ಥಾನಮಾನದ ಬಗ್ಗೆ ಅಂದು ತಳೆದ ನಿಲುವು ಇಂದಿನ ಸಮಾಜಕ್ಕೆ ಮಾದರಿ ಸ್ವರೂಪದಲ್ಲಿದೆ.

**ಕಾಯಕ ತತ್ವ:** ಬಸವಣ್ಣನವರು ಪ್ರತಿಪಾದಿಸಿದ ಬಹು ದೊಡ್ಡ ಆರ್ಥಿಕ ಸೂತ್ರವೆಂದರೆ ಕಾಯಕತತ್ವ, ಬಸವಣ್ಣನವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಶರಣನಿಗೂ ಕಾಯಕ ಅನಿವಾರ್ಯ. ಕಾಯಕವಿಲ್ಲದೆ ಗುರು ಲಿಂಗ ಜಂಗಮರಿಗೂ ಮುಕ್ತಿಯಿಲ್ಲ ಎಂಬ ಹಾಗೂ "ಕಾಯಕವೇ ಕೈಲಾಸ" ಎಂಬ ಸಿದ್ಧಾಂತದ ಪ್ರತಿಪಾದನೆಗೆ ಬಸವಣ್ಣನವರೇ ನಿಜವಾದ ಸ್ಫೂರ್ತಿಯಾಗಿದ್ದರು. ಕಾಯಕವು ಎಷ್ಟು ಮುಖ್ಯವೋ ಶರಣರು ಕೈಗೊಳ್ಳುವ ಕಾಯಕಕ್ಕೆ ಅವರು ಅಷ್ಟೇ ಗೌರವ ನೀಡಬೇಕು. ಕಾಯಕದಲ್ಲಿ ಮೇಲು ಕೀಳು ಎಂಬ ಭಾವ ಸಲ್ಲದು. ಶರಣರು ಮಾಡುವ ಕಾಯಕವು ಸತ್ಯ ಶುದ್ಧವಾಗಿರಬೇಕು, ಸಮಾಜಮುಖಿಯಾಗಿರಬೇಕು ಎಂಬುದು ಬಸವಣ್ಣನವರ ಅಚಲವಾದ ನಂಬಿಕೆ. ಈ ವಚನವು ಈ ಆಶಯವನ್ನು ಪ್ರತಿಪಾದಿಸುತ್ತದೆ."ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲವೆ, ಸತ್ಪಾತ್ರಕ್ಕೆ ಸಲ್ಲದಯ್ಯ,ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ,ನಮ್ಮ ಕೂಡಲಸಂಗನ ಶರಣರಿಗಲ್ಲದಮಾಡುವ ಅರ್ಥ ವ್ಯರ್ಥ ಕಂಡಯ್ಯ"ಇಲ್ಲಿ ಕೂಡಲ ಸಂಗನ ಶರಣರು ಎಂದರೆ ನಮ್ಮ ಸುತ್ತ ಇರುವ ಸಮಾಜ ಸಮಾಜದಲ್ಲಿನನೊಂದವರ ಬಗ್ಗೆ ಹಸಿದವರಿಗಾಗಿ ನಮ್ಮ ಕಾಯಕದ ಫಲ ದೊರಕಬೇಕು.

**ಶ್ರೇಷ್ಠ ಮಾನವತಾವಾದಿ:** ಎನಗಿಂತ ಕಿರಿಯರಿಲ್ಲ ಎಂಬ ವಿನಮ್ರ ಭಾವದಿಂದ ಜಗತ್ತನ್ನು ಬೆಳಗಿದ ಜಗದ ಜ್ಯೋತಿ, ಭಕ್ತಿ ಭಂಡಾರಿ ಶ್ರೇಷ್ಠ ಮಾನವತಾವಾದಿ, ಮಹಾನ್ ದಾರ್ಶನಿಕರು ಬಸವಣ್ಣನವರು. ಎಲ್ಲಕ್ಕಿಂತ ಮಿಗಿಲಾಗಿ ಶೋಷಣೆ ರಹಿತ ಸಮಾನತೆಯ ಸಮಾಜದ ಸೃಷ್ಟಿಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಸಾಮಾಜಿಕ ಹರಿಕಾರ ಸುಧಾರಕ ಬಸವಣ್ಣನವರು. ಅವರು ಪ್ರತಿಪಾದಿಸಿದ ಜೀವನ ಮೌಲ್ಯಗಳು ಎಂದೆಂದಿಗೂ ಪ್ರಸ್ತುತ.

ಈ ಕಾಲದಲ್ಲಿ ನಮ್ಮೊಳಗೆ ವರ್ಗ ಭೇದರಹಿತ ಸಮಸಮಾಜ ನಿರ್ಮಾಣಕ್ಕೆ ಇನ್ನೊಬ್ಬ ಬಸವಣ್ಣ ಹುಟ್ಟಿ ಬರಲಿ ಇಲ್ಲವೆ ನಾವೆಲ್ಲರೂ ಬಸವಣ್ಣರಾಗುವತ್ತ ದೃಢ ಸಂಕಲ್ಪ ತಳೆಯೋಣ. ಆ ಮೂಲಕ ಸುಂದರ ಸಮಾಜ ಕಟ್ಟೋಣ.

**– ಮಂಜುನಾಥ್ ನಾಯ್ಕ್,** ಹಿರಿಯ ಪತ್ರಕರ್ತರು.
ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

# ಲೆಕ್ಕಪರಿಶೋಧನಾ ಪೂರ್ವ ತಯಾರಿ
## (ಮಾರ್ಚ್ ಮುಂಚೆ ಮತ್ತು ನಂತರದ ಸಂಘದವರ ಜವಾಬ್ದಾರಿಗಳು)

### 8. ಸಿಬ್ಬಂದಿ ಉಪದಾನ ಮತ್ತು ಗಳಿಕೆ ರಜಾ

- **ಅವಕಾಶಗಳು:** ಕೆಲವು ಸಹಕಾರ ಸಂಘಗಳಲ್ಲಿ ಸಿಬ್ಬಂದಿ ಉಪದಾನ ಮತ್ತು ಗಳಿಕೆ ರಜಾ ಮೊತ್ತವನ್ನು ಯಾವುದೇ ಅವಕಾಶ ಕಲ್ಪಿಸದೇ ನೇರವಾಗಿ ಎಲ್.ಐ.ಸಿ. (ಅಥವಾ ಇತರೆ ಅನುಸೂಚಿತ ಸಂಸ್ಥೆ) ಯಲ್ಲಿ ತೊಡಗಿಸಿರುತ್ತಾರೆ. ಕಾರಣ ಸದರಿ ಹೂಡಿಕೆಗೆ ಸೂಕ್ತ ಅವಕಾಶ ಕಲ್ಪಿಸಿ ಅಢಾವೆ ಪತ್ರಿಕೆಯ ಜವಾಬ್ದಾರಿ ಭಾಗದಲ್ಲಿರುವ ಮೊತ್ತಕ್ಕೆ ಸಮನಾಗಿ ಹೂಡಿಕೆ ಮಾಡತಕ್ಕದ್ದು.
- ಎಲ್.ಐ.ಸಿ. (ಅಥವಾ ಇತರೆ ಅನುಸೂಚಿತ ಸಂಸ್ಥೆ)ಯಲ್ಲಿ ತೊಡಗಿಸಿದ ಹೂಡಿಕೆಯ ಮೊತ್ತಕ್ಕೆ ಸಾಲಾಖೈರಿಗೆ ಧೃಢೀಕರಣ ಪತ್ರ ಪಡೆಯತಕ್ಕದ್ದು.
- ಹೂಡಿಕೆ ಮೇಲೆ ಬಂದ ಬಡ್ಡಿಯನ್ನು ಜಮಾ–ಖರ್ಚು ಮಾಡಿಕೊಳ್ಳತಕ್ಕದ್ದು.
- ಅಢಾವೆ ಪತ್ರಿಕೆ ಎರಡೂ ಬದಿಯಲ್ಲಿ ಸಿಬ್ಬಂದಿ ಉಪದಾನ ಮತ್ತು ಗಳಿಕೆ ರಜಾ ಮೊತ್ತವು ಧೃಢೀಕರಣದಂತೆ ತಾಳೆಯಾಗಿರಬೇಕು.

### 9. ಷೇರು ಮೊತ್ತದಲ್ಲಿ ಹೂಡಿಕೆಗಳು

- ಇತರೆ ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದ ಷೇರು ಮೊತ್ತವು ಆಯಾ ಸಹಕಾರಿ ಸಂಸ್ಥೆಯ ಇಂದಿನ ಷೇರಿನ ಮುಖಬೆಲೆಗೆ ಪೂರ್ಣ ಪ್ರಮಾಣದಲ್ಲಿ ಷೇರು ಮೊತ್ತ ಪಾವತಿಯಾಗಿರುವ ಬಗ್ಗೆ ಧೃಢೀಕರಣ ಪಡೆಯತಕದ್ದು. ಅಪೂರ್ಣ ಷೇರುಗಳಿದ್ದಲ್ಲಿ ಆ ಸಹಕಾರಿ ಸಂಸ್ಥೆಯ ಕೆಲವು ಹಕ್ಕುಗಳು ಮೊಟಕಾಗುವ ಸಂಭವವಿದ್ದು (ಉದಾ: ಮತದಾನದ ಹಕ್ಕು) ಪೂರ್ಣ ಪ್ರಮಾಣದ ಮುಖ ಬೆಲೆಗೆ ಬಾಕಿ ಷೇರು ಮೊತ್ತವನ್ನು ಪಾವತಿಸತಕ್ಕದ್ದು.
- ಇತರೆ ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದ ಷೇರು ಮೊತ್ತಕ್ಕೆ ಆಯಾ ಸಹಕಾರಿ ಸಂಸ್ಥೆಗಳು ಲಾಭಾಂಶ ಘೋಷಣೆ ಮಾಡಿದ್ದಲ್ಲಿ, ಘೋಷಣೆ ಮಾಡಿದ ಲಾಭಾಂಶವು ಸಂಘದ ಬ್ಯಾಂಕ್ ಖಾತೆಗೆ ಜಮೆಯಾಗಿರುವುದನ್ನು ಧೃಢೀಕರಿಸಿಕೊಳ್ಳತಕ್ಕದ್ದು.

### 10. ಬ್ಯಾಂಕುಗಳಲ್ಲಿ ನಿಖರ ಠೇವಣಿಯಲ್ಲಿನ ಹೂಡಿಕೆಗಳು

- ಸಹಕಾರ ಸಂಘಗಳಲ್ಲಿ ಠೇವಣೆಗಳ ಮೇಲೆ ಬಂದ ಬಡ್ಡಿಯನ್ನು ಲಾಭಕ್ಕೆ ತೆಗೆದುಕೊಳ್ಳಲಾಗುತ್ತದೆ ಆದರೆ ಸಾಲಾಖೈರಿಗೆ ಬರಬೇಕಾದ ಬಡ್ಡಿಯನ್ನು ಲಾಭಕ್ಕೆ ತೆಗೆದುಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಾನೂನಿನ ಅಡಿಯಲ್ಲಿ ಅವಕಾಶವಿರುವುದಿಲ್ಲ. ಪರಂತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಅಡಿಯಲ್ಲಿ ನಿಯಮ 22(ಎ) ಅಡಿಯಲ್ಲಿ ನಿಬಂಧಕರ ಅನುಮತಿ ಪಡೆದು ಬರತಕ್ಕ ಬಡ್ಡಿಯನ್ನು ಲಾಭಕ್ಕೆ ಪಡೆಯಬಹುದು.
- ಆದರೆ ಬ್ಯಾಂಕುಗಳು ಸಾಲಾಖೈರಿಗೆ ಸಂಘಕ್ಕೆ ಪಾವತಿಸಬೇಕಾದ ಬಡ್ಡಿಯ ಮೇಲೆ ಟಿ.ಡಿ.ಎಸ್. ಕಟಾವು ಮಾಡಿರುತ್ತದೆ ಹಾಗೂ ಎಷ್ಟು ಮೊತ್ತದ ಬಡ್ಡಿಯ ಮೇಲೆ ಟಿ.ಡಿ.ಎಸ್. ಕಟಾವು ಮಾಡಿರುತ್ತಾರೆ ಎಂಬ ಮಾಹಿತಿಯನ್ನು ಆಯಾ ಬ್ಯಾಂಕುಗಳು ಆದಾಯ ತೆರಿಗೆ ಇಲಾಖೆಗೆ ಮಾಹಿತಿಯನ್ನು ಸಲ್ಲಿಸಿರುತ್ತವೆ.
- ಈ ಸಂದರ್ಭದಲ್ಲಿ ಸಂಘವು ಲಾಭಕ್ಕೆ ಪರಿಗಣನೆ ಮಾಡಿದ ಬಡ್ಡಿ ಮೊತ್ತಕ್ಕೂ ಮತ್ತು ಬ್ಯಾಂಕಿನವರು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ಬಡ್ಡಿ ಮೊತ್ತದ ಮಾಹಿತಿಗೂ ವ್ಯತ್ಯಾಸ ಉಂಟಾಗುತ್ತದೆ.
- ಈ ರೀತಿ ವ್ಯತ್ಯಾಸ ಉಂಟಾದಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ಲೆಕ್ಕಪರಿಶೋಧನೆ ಮಾಡುವ ಲೆಕ್ಕಪರಿಶೋಧಕರಿಗೆ ಮತ್ತು ಆದಾಯ ತೆರಿಗೆ ಸಲ್ಲಿಸುವ ಲೆಕ್ಕಪರಿಶೋಧಕರಿಗೆ ಸದರಿ ವ್ಯತ್ಯಾಸದ ಮಾಹಿತಿಯನ್ನು ಈರ್ವರ ಗಮನಕ್ಕೆ ತರತಕ್ಕದ್ದು.
- ಬ್ಯಾಂಕುಗಳಲ್ಲಿರುವ ಸಂಘದ ಎಲ್ಲಾ ಅವಧಿ/ನಿಖರ ಠೇವಣೆಗಳನ್ನು ಮಾರ್ಚ್ 30ಕ್ಕೆ ನವೀಕರಣವಾಗುವ ರೀತಿಯಲ್ಲಿ ಹೂಡಿಕೆಗಳನ್ನು ನಿರ್ವಹಿಸಿದಲ್ಲಿ ಈ ರೀತಿಯ ವ್ಯತ್ಯಾಸ ಉಂಟಾಗದಂತೆ ನೋಡಿಕೊಳ್ಳಬಹುದು.
- ನವೀಕರಣವಾಗುವ ಅಥವಾ ನವೀಕರಣವಾಗಿರುವ ಅವಧಿ/ನಿಖರ ಠೇವಣೆಗಳ ಬಾಂಡ್‌ಗಳ ಝೆರಾಕ್ಸ್ ಪ್ರತಿಯನ್ನು ಪ್ರತ್ಯೇಕ ಕಡತದಲ್ಲಿ ಕಾಯ್ದಿರಿಸಬೇಕು.

### 11. ಕಡ್ಡಾಯ ಹೂಡಿಕೆಗಳು

ಕರ್ನಾಟಕ ಸಹಕಾರ ಸಂಘ ಕಾಯ್ದೆ ಕಲಂ 58ರಲ್ಲಿನ ಅನುಸೂಚಿತ ಸಂಸ್ಥೆಗಳಲ್ಲಿ ಈ ಕೆಳಕಂಡ ಹೂಡಿಕೆಗಳನ್ನು ಮಾಡತಕ್ಕದ್ದು.

- ಕಾಯ್ದಿಟ್ಟ/ಮೀಸಲು ನಿಧಿ
- ಕಟ್ಟಡ ನಿಧಿ
- ನಗದು ಮೀಸಲು ಮತ್ತು ದ್ರವ್ಯಾಸ್ತಿ ಮೀಸಲು ಮೊತ್ತ (CRR & SLR)

### ಇತರೆ ಅಂಶಗಳು:

12. ಕೈಲ್ಲಿರುವ ನಗದು ಶಿಲ್ಕು ಉಪನಿಯಮಗಳ ಮಿತಿಯೊಳಗೆ ಇರುವಂತೆ ನೋಡಿಕೊಳ್ಳುವುದು ಹಾಗೂ ಸಾಲಾಖೈರಿಗೆ ಆಡಳಿತ ಮಂಡಳಿಯವರು ನಗದು ಶಿಲ್ಕು ಪರಿಶೀಲನೆ ಮಾಡಿ ಡಿನಾಮಿನೇಷನ್ ಸಹಿತ ಸಹಿ ಮಾಡಿ ಧೃಢೀಕರಿಸುವುದು. ಶಾಖೆಗಳಿದ್ದಲ್ಲಿ ಪ್ರತಿ ಶಾಖೆಯಲ್ಲೂ ಸಹ ಸಾಲಾಖೈರಿಗೆ ನಗದು ಪರಿಶೀಲನೆ ಮಾಡಿ ಧೃಢೀಕರಿಸಿ ಸದರಿ ಧೃಢೀಕರಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕು.
13. ಸಂಘದ ಚರಾಸ್ತಿ ಮತ್ತು ಸ್ಥಿರಾಸ್ತಿ ರಿಜಿಸ್ಟರ್‌ನ್ನು ಇಂದೀಕರಿಸುವುದು. (ಅಪ್‌ಡೇಟ್ ಮಾಡುವುದು)
14. ಅವಶ್ಯವಿರದಿದ್ದಲ್ಲಿ ಠೇವಣೆಗಳ ಮೇಲೆ ಪಡೆದ ಸಾಲಗಳನ್ನು ವರ್ಷಾಂತ್ಯದೊಳಗೆ ಮರು ಪಾವತಿಯಾಗುವಂತೆ ನೋಡಿಕೊಳ್ಳುವುದು.
15. ಸಾಲಾಖೈರಿಗೆ ಪಾವತಿಗೆ ಬಾಕಿ ಇರುವ ಚಿಕ್ಕ ಪುಟ್ಟ ಮೊತ್ತಗಳನ್ನು ಪಾವತಿಸುವುದು

16. ಸಾಲಾಖೈರಿಗೆ ಸಹಕಾರ ಶಿಕ್ಷಣ ನಿಧಿಯನ್ನು ಮಹಾಮಂಡಳಕ್ಕೆ ಪಾವತಿಸಿ ಸದರಿ ಶೀರ್ಷಿಕೆಯಡಿ ಯಾವುದೇ ಅಂತಿಮ ಶಿಲ್ಕು ಇರದಂತೆ ನೋಡಿಕೊಳ್ಳುವುದು.
17. ಅಢಾವೆಯ ವಿವಿಧ ಶೀರ್ಷಿಕೆಗಳಡಿ ತುಂಬಾ ಹಳೆಯದಾದ ಬರತಕ್ಕ ಮತ್ತು ಕೊಡತಕ್ಕ ಬಾಬತ್ತುಗಳು ಮುಂದುವರೆದಿದ್ದಲ್ಲಿ ಸದರಿ ಮೊತ್ತಗಳನ್ನು ಸೂಕ್ತ ದಾಖಲೆ/ಮಾಹಿತಿಯೊಂದಿಗೆ ಆಡಳಿತ ಮಂಡಳಿ ಠರಾವುನೊಂದಿಗೆ ವಸೂಲಿಗೆ ಅಥವಾ ಪಾವತಿಗೆ ಕ್ರಮವಿಡತಕ್ಕದ್ದು.
18. ಅಢಾವೆ ಪತ್ರಿಕೆಯಲ್ಲಿ ಈ ಹಿಂದೆ ನಡೆದ ಹಣ ದುರುಪಯೋಗದ ಮತ್ತು ಇತರೆ ವಸೂಲಾತಿಗಳ ಮೊತ್ತಗಳ ವಸೂಲಿಗೆ ಸೂಕ್ತ ಕಾನೂನು ಕ್ರಮವಿಡತಕ್ಕದ್ದು.
19. ಸುಸ್ತಿ ಸಾಲ ವಸೂಲಾತಿಗೆ ಸೂಕ್ತ ಕಾನೂನು ಕ್ರಮವಿಡತಕ್ಕದ್ದು. ಸುಸ್ತಿ ಸಾಲ ವಸೂಲಾಗದೇ ಇದ್ದ ಪಕ್ಷದಲ್ಲಿ, ವಸೂಲಾಗದೇ ಇರುವ ಮೊತ್ತಕ್ಕೆ ಎನ್.ಪಿ.ಎ. ಅವಕಾಶವನ್ನು ಕಲ್ಪಿಸುವುದರಿಂದ ಸಂಘಕ್ಕೆ ಹಾನಿ ಉಂಟಾಗುತ್ತದೆ ಅಥವಾ ಲಾಭ ಕಡಿಮೆಯಾಗುತ್ತದೆ. ತತ್ಪರಿಣಾಮವಾಗಿ ಸಂಘದ ಸಿ.ಆರ್.ಎ.ಆರ್. ಪ್ರಮಾಣ ಕಡಿಮೆಯಾಗಿ ಸಂಘದ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.
20. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಹಿಂದಿನ ಸಾಲಿನ ಸರ್ಕಾರದಿಂದ ಬರತಕ್ಕ ಮತ್ತು ಡಿಸಿಸಿ ಬ್ಯಾಂಕಿಗೆ ಪಾವತಿಸತಕ್ಕ ಬಡ್ಡಿಯನ್ನು ಮತ್ತು ವರದಿ ಸಾಲಿನ ಸದರಿ ಬಡ್ಡಿ ಬಾಬತ್ತುಗಳನ್ನು ಸೂಕ್ತ ದಾಖಲೆಗಳೊಂದಿಗೆ ಮಾರ್ಚ್ 31 ರ ಒಳಗಾಗಿ ಜಮಾ ಖರ್ಚು ಮಾಡಿಕೊಳ್ಳತಕ್ಕದ್ದು.
21. ಪ್ರತಿ ತಿಂಗಳ 15ನೇ ತಾರೀಖಿನ ಒಳಗಾಗಿ ಸಿಬ್ಬಂದಿ ಭವಿಷ್ಯ ನಿಧಿಯನ್ನು ಪಾವತಿಸತಕ್ಕದ್ದು ಇಲ್ಲವಾದಲ್ಲಿ ಸಿಬ್ಬಂದಿ ಭವಿಷ್ಯ ನಿಧಿ ಇಲಾಖೆಯವರು ಬಡ್ಡಿ ಮತ್ತು ದಂಡಗಳನ್ನು ವಸೂಲಿಸುವುದಲ್ಲದೇ ಆದಾಯ ತೆರಿಗೆ ಇಲಾಖೆಯು ಸಿಬ್ಬಂದಿ ವಂತಿಕೆಯ ಮೇಲೆ ಶೇ.30 ರವರೆಗೆ ಆದಾಯ ತೆರಿಗೆ ಮತ್ತು ಬಡ್ಡಿ ವಿಧಿಸುತ್ತದೆ.
22. ಸಂಘಕ್ಕೆ ಸಂಭಂದಪಟ್ಟ ಯಾವುದೇ ವಿಮಾ ಕಂತುಗಳನ್ನು ನಿಗದಿತ ದಿನಾಂಕದೊಳಗೆ ಪಾವತಿಸತಕ್ಕದ್ದು. ನಿಗದಿತ ದಿನಾಂಕದೊಳಗೆ ಪಾವತಿಯಾಗದೇ ಇದ್ದ ಪಕ್ಷದಲ್ಲಿ ಕನಿಷ್ಟ ಪಕ್ಷ ಮಾರ್ಚ್ 31ರ ಒಳಗಡೆ ಎಲ್ಲಾ ವಿಮಾ ಕಂತುಗಳನ್ನು ಪಾವತಿಸಿ ನವೀಕರಿಸತಕ್ಕದ್ದು.
23. ಸಂಘದ ವೃತ್ತಿ ತೆರಿಗೆ, ಸಿಬ್ಬಂದಿ ವೃತ್ತಿ ತೆರಿಗೆ, ಕಟ್ಟಡ ತೆರಿಗೆ, ತೂಕ ಮತ್ತು ಅಳತೆ, ರಸಗೊಬ್ಬರ ಪರವಾನಿಗೆ ನವೀಕರಣ, ಆಹಾರ ಧಾನ್ಯ ವಿತರಣಾ ಪರವಾನಿಗೆ ನವೀಕರಣ ಹಾಗೂ ಇತರೆ ಕಾನೂನು ಬದ್ಧ ಪಾವತಿಗಳನ್ನು ಮಾರ್ಚ್ 31ರ ಒಳಗಡೆ ಪಾವತಿಸಿ ನವೀಕರಿಸತಕ್ಕದ್ದು.
24. ಸಂಘವು ಕಟ್ಟಡಗಳನ್ನು ಬಾಡಿಗೆಗೆ ನೀಡಿದ್ದಲ್ಲಿ ಪ್ರತಿ ತಿಂಗಳು ವಸೂಲಾತಿಗೆ ಕ್ರಮವಿಡತಕ್ಕದ್ದು. ಪ್ರತಿ ತಿಂಗಳು ವಸೂಲಿಯಾಗದೇ ಉಳಿದ ಮೊತ್ತವನ್ನು ಕನಿಷ್ಠ ಪಕ್ಷ ಮಾರ್ಚ್ 31ರ ಒಳಗಡೆ ವಸೂಲಿಸಲು ಕ್ರಮವಿಡತಕ್ಕದ್ದು. ಸಂಘವು ಜಿ.ಎಸ್.ಟಿ. ನೊಂದಣಿ ಹೊಂದಿದ್ದಲ್ಲಿ ವಾಣಿಜ್ಯ ಬಳಕೆಗೆ ಬಾಡಿಗೆ ನೀಡಿದ ಕಟ್ಟಡಗಳ ಮೇಲೆ ಹೆಚ್ಚುವರಿಯಾಗಿ ಶೇ.18 ರಷ್ಟು ಜಿ.ಎಸ್.ಟಿ. ವಸೂಲಿಸಿ ಸರ್ಕಾರಕ್ಕೆ ಪಾವತಿಸತಕ್ಕದ್ದು. ಇಲ್ಲವಾದಲ್ಲಿ ಬಾಡಿಗೆ ಮೊತ್ತದಲ್ಲಿ ಜಿ.ಎಸ್.ಟಿ. ಪಾವತಿಸಬೇಕಾಗುತ್ತದೆ. ತತ್ಪರಿಣಾಮವಾಗಿ ಬಾಡಿಗೆಯ ಶೇ.18 ರಷ್ಟು ಮೊತ್ತವು ಸಂಘಕ್ಕೆ ನಷ್ಟವಾಗುತ್ತದೆ.
25. ಯಾವುದೇ ಸಹಕಾರ ಸಂಘವು ಕಟ್ಟಡಗಳನ್ನು ಬಾಡಿಗೆ ಪಡೆದಿದ್ದು, ಆ ಕಟ್ಟಡದ ಮಾಲೀಕನು ಜಿ.ಎಸ್.ಟಿ. ನೊಂದಣಿ ಹೊಂದಿರದೇ ಇದ್ದ ಪಕ್ಷದಲ್ಲಿ ಅಕ್ಟೋಬರ್ 2024 ರಿಂದ ಅನ್ವಯವಾಗುವ ಬಾಡಿಗೆಯ ಮೇಲೆ ಶೇ.18ರಷ್ಟು ಜಿ.ಎಸ್.ಟಿ. ಮೊತ್ತವನ್ನು ಸರ್ಕಾರಕ್ಕೆ ಪಾವತಿಸತಕ್ಕದ್ದು (ಆರ್.ಸಿ.ಎಂ. ವ್ಯವಸ್ಥೆಯಡಿ). ಹೆಚ್ಚಿನ ವಿವರಗಳಿಗೆ ತಮ್ಮ ಸಂಘದ ಜಿ.ಎಸ್.ಟಿ. ಸಲಹೆಗಾರರನ್ನು ಸಂಪರ್ಕಿಸತಕ್ಕದ್ದು.
26. ಜಿ.ಎಸ್.ಟಿ. ನೋಂದಣಿ ಹೊಂದಿದ ಸಂಘಗಳು ತಮ್ಮ ವಾರ್ಷಿಕ ವಹಿವಾಟಿನ ಮೊತ್ತವು 12 ತಿಂಗಳುಗಳ ಜಿ.ಎಸ್.ಟಿ. ನಮೂನೆಗಳಲ್ಲಿ ನಮೂದಿಸಿದ ಒಟ್ಟು ಮೊತ್ತಕ್ಕೆ ತಾಳೆಯಾಗಿರುವುದನ್ನು ಧೃಢೀಕರಿಸಿಕೊಳ್ಳುವುದು.
27. ಜಿ.ಎಸ್.ಟಿ.ಆರ್. 3ಬಿ ಮೂಲಕ ಪಾವತಿ ಮಾಡುವ ಜಿ.ಎಸ್.ಟಿ. ಮೊತ್ತಗಳಿಗೆ ಹೊಂದಿಕೆಯಾಗುವಂತೆ ಇನ್ ಪುಟ್–ಔಟ್ ಪುಟ್ ಮೊತ್ತಗಳನ್ನು ಸಂಘದ ಪುಸ್ತಕಗಳಲ್ಲಿ ಜಮಾ–ಖರ್ಚು ಮಾಡಿಕೊಳ್ಳತಕ್ಕದ್ದು.
28. ಸರ್ಕಾರದ ಪಡಿತರ ಆಹಾರಧಾನ್ಯ ವಿತರಣೆ ಹೊಂದಿದ ಸಂಘಗಳು ಖಾಲಿ ಚೀಲ ಮಾರಾಟದ ಲೆಕ್ಕವಿಡತಕ್ಕದ್ದು. ಸದರಿ ಮಾರಾಟದ ಮೇಲೆ ಜಿ.ಎಸ್.ಟಿ. ಪಾವತಿಸತಕ್ಕದ್ದು. ಖಾಲಿ ಚೀಲ ಮಾರಾಟದ ಮಾಹಿತಿಯು ಲೆಕ್ಕಪರಿಶೋಧನಾ ವರದಿಯ ಭಾಗವಾಗಿರುತ್ತದೆ.
29. ವರದಿ ಸಾಲಿನಲ್ಲಿ ಅಥವಾ ಹಿಂದಿನ ಸಾಲುಗಳಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 64/65ರ ಅಡಿಯಲ್ಲಿ ವಿಚಾರಣೆ ಅಥವಾ ಪರಿವೀಕ್ಷಣೆಯಾಗಿ ಕಲಂ 68ರ ಅಡಿಯಲ್ಲಿ ಆದೇಶ ಆಗಿದ್ದಲ್ಲಿ, ಸದರಿ ಆದೇಶದಲ್ಲಿ ಆರ್ಥಿಕ ತಖ್ತೆಗಳಿಗೆ ಸಂಬಂಧಪಟ್ಟ ದುರುಪಯೋಗದ ಮೊತ್ತಗಳು ಅಥವಾ ವಸೂಲಾತಿ ಮೊತ್ತಗಳು ಇದ್ದಲ್ಲಿ ಸದರಿ ಮೊತ್ತಗಳನ್ನು ಯಥಾವತ್ತಾಗಿ ಆರ್ಥಿಕ ತಖ್ತೆಗಳಲ್ಲಿ ಅಳವಡಿಸಿಕೊಂಡು ಸೂಕ್ತ ಅವಕಾಶಗಳನ್ನು ಕಲ್ಪಿಸಿ, ವಸೂಲಾಗಬೇಕಾದ ಮೊತ್ತವನ್ನು ವಸೂಲಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದು ಆಡಳಿತ ಮಂಡಳಿಯವರ ಕರ್ತವ್ಯವಾಗಿರುತ್ತದೆ.

**30. ಅಂತಿಮ ದಾಸ್ತಾನು ಶಿಲ್ಕು**

**ಸಾಮಾನ್ಯ ಪ್ರಕರಣ (Normal Practice):**

- ಸಾಲಾಖೈರಿಗೆ ಸಂಘದಲ್ಲಿರುವ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ಆಡಳಿತ ಮಂಡಳಿಯವರು ಸಂಬಂಧಪಟ್ಟ ಸಿಬ್ಬಂದಿಗಳ ಸಮ್ಮುಖದಲ್ಲಿ ಕೈಗೊಳ್ಳತಕ್ಕದ್ದು.
- ಸದರಿ ಪರಿಶೀಲನೆಯು ಮಾರ್ಚ್ 31 ರಂದು ಅಥವಾ ಎಪ್ರಿಲ್ 01 ರಂದು ಕೈಗೊಳ್ಳುವುದು ಸೂಕ್ತ. ಭೌತಿಕ ಪರಿಶೀಲನಾ ಸಮಯದಲ್ಲಿ ಯಾವುದೇ ಖರೀದಿ & ಮಾರಾಟದ ಸಾಗಾಣಿಕೆ ಇರಕೂಡದು.

- ಭೌತಿಕ ಪರಿಶೀಲನೆಯಲ್ಲಿ ಕಂಡುಬಂದ ಅಂಕಿ–ಅಂಶಗಳನ್ನು ದಾಸ್ತಾನು ರಿಜಿಸ್ಟರ್‌ಗೆ ತಾಳೆ ಮಾಡಿ ಕೊಳ್ಳತಕ್ಕದ್ದು.
- ತದನಂತರ ಭೌತಿಕ ದಾಸ್ತಾನು ಪರಿಶೀಲನಾ ಪಟ್ಟಿಯಲ್ಲಿ ಲಭ್ಯವಾಗುವ ದಾಸ್ತಾನಿಗೆ ಖರೀದಿ ಬೆಲೆ ಅಥವಾ ಮಾರುಕಟ್ಟೆ ಬೆಲೆ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಬೆಲೆಗೆ ಅಂತಿಮ ದಾಸ್ತಾನು ಮೌಲ್ಯ ನಿಗದಿಪಡಿಸತಕ್ಕದ್ದು.
- ಭೌತಿಕ ದಾಸ್ತಾನು ಪರಿಶೀಲನಾ ಪಟ್ಟಿಗೆ ಆಡಳಿತ ಮಂಡಳಿಯವರು, ಸಂಘದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಂಬಂಧಪಟ್ಟ ಗುಮಾಸ್ತರು ಸಹಿ ಮಾಡಿ ಮತ್ತು ಮೊಹರುಗಳನ್ನು ಹಾಕಿ ಲೆಕ್ಕಪರಿಶೋಧಕರಿಗೆ ಹಾಜರುಪಡಿಸಬೇಕು.

### ವಿಶೇಷ ಪ್ರಕರಣ 1

### Liability System of Maintaining the Stock

- ಕೆಲವು ಸಹಕಾರ ಸಂಘಗಳಲ್ಲಿ ದಾಸ್ತಾನು ಖರೀದಿಯಾದ ತಕ್ಷಣ, ಖರೀದಿಯಾದ ದಾಸ್ತಾನನ್ನು ಮಾರಾಟ ಗುಮಾಸ್ತನ ಖಾತೆಗೆ ಮಾರಾಟ ಮೌಲ್ಯಕ್ಕೆ ಖರ್ಚು ಹಾಕಿ (ಎಸ್.ಎ.) ಮಾರಾಟ ಗುಮಾಸ್ತನಿಂದ ಬರತಕ್ಕ ಮೊತ್ತ ಎಂದು ತೋರಿಸುತ್ತಾರೆ.
- ಈ ವ್ಯವಸ್ಥೆ/ಪದ್ಧತಿಯಡಿ ದಾಸ್ತಾನು ಮಾರಾಟವಾದ ತಕ್ಷಣ ಮಾರಾಟದ ಗುಮಾಸ್ತನ ಎಸ್.ಎ.. ಖಾತೆಗೆ ಮಾರಾಟ ಮೊತ್ತವನ್ನು ಜಮಾ ಹಿಡಿಯಲಾಗುತ್ತದೆ.
- ಈ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಮತ್ತು ಮುಖ್ಯಕಾರ್ಯನಿರ್ವಾಹಕರು ಗಮನಿಸಬೇಕಾದ ಅಂಶವೇನೆಂದರೆ ಗೋದಾಮಿನಲ್ಲಿ ಲಭ್ಯವಿರುವ ಭೌತಿಕ ದಾಸ್ತಾನಿನ ಮಾರಾಟ ಮೌಲ್ಯ ಮತ್ತು ಅಥಾವೆ ಪತ್ರಿಕೆಯಲ್ಲಿ ಮಾರಾಟ ಗುಮಾಸ್ತನಿಂದ ಬರತಕ್ಕ ಮೊತ್ತ (ಎಸ್.ಎ.) ಕ್ಕೆ ತಾಳೆ ನೋಡುವುದು. ವ್ಯತ್ಯಾಸ ಕಂಡುಬಂದಲ್ಲಿ ದಾಸ್ತಾನು ದುರುಪಯೋಗವಾಗಿರುವ ಪ್ರಮೇಯ ಉಂಟಾಗುವುದನ್ನು ಗಮನಿಸುವುದು.
- ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ ಗುಮಾಸ್ತನಿಂದ ಬರತಕ್ಕ ಮೊತ್ತ (ಎಸ್.ಎ.) ಬಾಕಿ ಉಳಿದಲ್ಲಿ ಸದರಿ ಲೆಕ್ಕವನ್ನು ಮರುಹೊಂದಾಣಿಕೆ (ರಿವರ್ಸ್ ಎಂಟ್ರಿ) ಮಾಡಿ ಅಂತಿಮ ದಾಸ್ತಾನು ತೋರಿಸತಕ್ಕದ್ದು.
- ಆದಾಗ್ಯೂ ಸದರಿ ಪದ್ಧತಿಯು ಮಾನ್ಯವಿರುವುದಿಲ್ಲ.

### ವಿಶೇಷ ಪ್ರಕರಣ 2

### Receipt of Stock based on Delivery Challan without Purchase Invoice

- ಕೆಲವು ಸಹಕಾರ ಸಂಘಗಳಲ್ಲಿ ಕೆಲವು ಕಂಪನಿಗಳಿಂದ ಡೆಲಿವರಿ ಚಲನ್ ಮೂಲಕ ದಾಸ್ತಾನು ಸರಬರಾಜು ಮಾಡಿ ಕೆಲವು ದಿನಗಳ ನಂತರ ಸಂಘಕ್ಕೆ ಖರೀದಿ ಬಿಲ್ಲು ಲಭ್ಯವಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ, ಖರೀದಿ ಬಿಲ್ಲು ಇಲ್ಲದೇಯೇ ದಾಸ್ತಾನು, ದಾಸ್ತಾನು ರಿಜಿಸ್ಟರ್‌ನಲ್ಲಿ ಸ್ಥಾನ ಪಡೆಯುತ್ತದೆ.
- ಈ ತರಹದ ಪ್ರಕರಣಗಳು ಒಂದೇ ಆರ್ಥಿಕ ವರ್ಷದಲ್ಲಿ ಲೆಕ್ಕಪತ್ರದಲ್ಲಿ ಗಣನೆಗೆ ಬಂದರೆ ವ್ಯಾಪಾರಿ ಲಾಭದ ಮೇಲೆ ಪರಿಣಾಮ ಬೀರುವುದಿಲ್ಲ.
- ಒಂದು ವೇಳೆ ಜನವರಿ, ಫೆಬ್ರುವರಿ ಅಥವಾ ಮಾರ್ಚ್ ತಿಂಗಳಲ್ಲಿ ಡೆಲಿವರಿ ಚಲನ್ ಮೂಲಕ ದಾಸ್ತಾನು ಬಂದು ದಾಸ್ತಾನು ರಿಜಿಸ್ಟರ್‌ನಲ್ಲಿ ಸ್ಥಾನ ಪಡೆದುಕೊಂಡು ಮಾರ್ಚ್ ನಂತರ (ಅಂದರೆ ಮುಂದಿನ ಆರ್ಥಿಕ ವರ್ಷದಲ್ಲಿ) ಖರೀದಿ ಬಿಲ್ಲನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ವ್ಯಾಪಾರಿ ಲಾಭದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಏಕೆಂದರೆ ಹಿಂದಿನ ಸಾಲಿನಲ್ಲಿ ವ್ಯಾಪಾರಿ ಪತ್ರಿಕೆಯಲ್ಲಿ ಖರೀದಿ ಇಲ್ಲದೇಯೇ ದಾಸ್ತಾನು ರಿಜಿಸ್ಟರ್‌ನಲ್ಲಿರುವ ಅಂಕಿ–ಸಂಖ್ಯೆಗಳನ್ನು ವ್ಯಾಪಾರಿ ಪತ್ರಿಕೆಯ ಅಂತಿಮ ದಾಸ್ತಾನು ಮೌಲ್ಯ ಮಾಪನದಲ್ಲಿ ಕೂಡಿಕೊಂಡಿರುವುದರಿಂದ ಹೆಚ್ಚಿನ ವ್ಯಾಪಾರಿ ಲಾಭ ಉಂಟಾಗಿ ಮುಂದಿನ ವರ್ಷದಲ್ಲಿ ಖರೀದಿ ಬಿಲ್ಲು ಲೆಕ್ಕಕ್ಕೆ ಬರುವುದರಿಂದ ವ್ಯಾಪಾರಿ ಲಾಭವು ಕಡಿಮೆಯಾಗಿ ಸಂಘದ ವ್ಯಾಪಾರೀ & ನಿವ್ವಳ ಲಾಭವು ಕರಾರುವಕ್ಕಾಗಿ ಬಿಂಬಿತವಾಗುವುದಿಲ್ಲ.
- ಇಂತಹ ಪ್ರಕರಣಗಳಲ್ಲಿ ಅಂತಿಮ ದಾಸ್ತಾನಿನಲ್ಲಿ ಡೆಲಿವರಿ ಚಲನ್ ಮೂಲಕ ಬಂದ ದಾಸ್ತಾನು ಕೂಡಿಕೊಂಡಿರುವುದರಿಂದ ಖರೀದಿ ಬಿಲ್ಲು ಇಲ್ಲದೇ ಇದ್ದರೂ ಸಹ, ಖರೀದಿ ಮೊತ್ತವನ್ನು ವ್ಯಾಪಾರಿ ಪತ್ರಿಕೆಯಲ್ಲಿ ಖರೀದಿ ಭಾಗದಲ್ಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಆಗ ಮಾತ್ರ ಸಂಘದ ಲಾಭವು ಕರಾರುವಕ್ಕಾಗಿ ಬಿಂಬಿತವಾಗುತ್ತದೆ.
- ಇಂತಹ ಪ್ರಕರಣಗಳಿದ್ದಲ್ಲಿ ಸಂಘದವರು ಲೆಕ್ಕಪರಿಶೋಧಕರ ಗಮನಕ್ಕೆ ತರುವುದು ಅವಶ್ಯವಿರುತ್ತದೆ.

ಕೊನೆಯದಾಗಿ ಹೇಳುವುದಾದರೆ ಮುಂಬರುವ ಲೆಕ್ಕಪರಿಶೋಧನೆಯಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿಯವರು ಮತ್ತು ಮುಖ್ಯಕಾರ್ಯನಿರ್ವಾಹಕರು ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ, ಪಾಲಿಸಿದಲ್ಲಿ ಸಂಘದ ಆರ್ಥಿಕ ಸ್ಥಿತಿ–ಗತಿ, ಲಾಭ–ನಷ್ಟಗಳು ಕರಾರುವಕ್ಕಾಗಿ ಬಿಂಬಿಸುವಲ್ಲಿ ಸಹಕಾರಿಯಾಗುತ್ತದೆ ಎಂಬುದು ಈ ಲೇಖನದ ಆಶಯ.

### ವಿಶೇಷ ಸೂಚನೆ (Disclamer):

ಈ ಲೇಖನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಮತ್ತು ನಿಲುವುಗಳು ಸಂಪೂರ್ಣವಾಗಿ ಲೇಖಕರಿಗೆ ಸಂಬಂಧಿಸಿದವು ಮತ್ತು ಯಾವುದೇ ನಿರ್ದಿಷ್ಟ ಸಹಕಾರಿ ಸಂಸ್ಥೆ/ಇಲಾಖೆಯ ಅಧಿಕೃತ ನೀತಿ ಅಥವಾ ನಿಲುವನ್ನು ಪ್ರತಿಬಿಂಬಿಸುವುದಿಲ್ಲ. ಈ ವಿಷಯವು ಕೇವಲ ಮಾಹಿತಿ ಮತ್ತು ಶಿಕ್ಷಣದ ಉದ್ದೇಶಕ್ಕಾಗಿ ಒದಗಿಸಲ್ಪಟ್ಟಿದೆ ಮತ್ತು ವೃತ್ತಿಪರ ಅಥವಾ ಕಾನೂನು ಸಲಹೆಯಾಗಿ ಪರಿಗಣಿಸಬಾರದು. ಸಹಕಾರಿ ಲೆಕ್ಕಪರಿಶೋಧನಾ ವಿಧಾನಗಳ ಕುರಿತು ನಿರ್ದಿಷ್ಟ ಮಾರ್ಗದರ್ಶನಕ್ಕಾಗಿ, ಸಂಬಂಧಿತ ಕಾನೂನು ನಿಯಮ ತಜ್ಞರನ್ನು ಸಂಪರ್ಕಿಸುವುದು ಸೂಕ್ತ. ಮಾಹಿತಿ ಶುದ್ಧತೆಗಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದರೂ, ವಿಷಯದಲ್ಲಿರುವ ಯಾವುದೇ ದೋಷ ಅಥವಾ ತಪ್ಪುಗಳ ಕುರಿತು ಲೇಖಕರು ಹೊಣೆಗಾರರಾಗಿರುವುದಿಲ್ಲ.



**ಲೇಖಕರು :**
**ಚಿಲಕರಾಯ ಎರ್ರಿಸ್ವಾಮಿ, ಚಿಲಕರಾಯ & ಕಂ.,**
**ಸನ್ನದು ಲೆಕ್ಕಿಗರು, ಬಳ್ಳಾರಿ. 94489 77222**
ca.yerriswamy@gmail.com

# ಗ್ರಾಹಕರ ಮನೆಗೆ ಬರಲಿದೆ ಕೆಎಂಎಫ್ ಇಡ್ಲಿ ದೋಸೆ ಹಿಟ್ಟು



ರಾಜ್ಯದ ಪ್ರತಿಷ್ಠಿತ ನಂದಿನಿ ಹಾಲಿನ ಬ್ರಾಂಡ್‌ನ ಮೌಲ್ಯ ವೃದ್ಧಿ ಹಾಗೂ ಮಾರುಕಟ್ಟೆ ವಿಸ್ತರಣೆಯ ಭಾಗವಾಗಿ ರಾಜ್ಯ ಸಹಕಾರಿ ಸಾಲ ಉತ್ಪಾದಕರ ಮಹಾಮಂಡಳವು ಇ-ಕಾಮರ್ಸ್ ಫ್ಲಾಟ್‌ಫಾರ್ಮ್‌ಗೆ ಲಗ್ಗೆ ಇಟ್ಟಿದ್ದು ಏಪ್ರಿಲ್-1ರಿಂದ ನಂದಿನಿ ಇಡ್ಲಿ ಮತ್ತು ದೋಸೆ ಹಿಟ್ಟು ಗ್ರಾಹಕರ ಮನೆ ಬಾಗಿಲಿಗೆ ಪೂರೈಕೆಯಾಗಲಿದೆ. 2024ರ ಡಿಸೆಂಬರ್-25ರಂದು ಬಿಡುಗಡೆಯಾಗಿದ್ದ ನಂದಿನಿ ಇಡ್ಲಿ ದೋಸೆ ಇಟ್ಟಿಗೆ ಮಾರುಕಟ್ಟೆಯಲ್ಲಿ ಬಾರಿ ಬೇಡಿಕೆ ಸೃಷ್ಟಿಯಾಗಿದೆ. ಇದರಿಂದ ಉತ್ತೇಜಿತವಾಗಿರುವ ಕೆಎಂಎಫ್ ನಂದಿನಿ ಪಾರ್ಲರ್‌ಗಳಿಂದ ಹೊರಗೂ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಲು ಮುಂದಾಗಿದೆ. ತ್ವರಿತವಾಗಿ ದಿನಸಿ ಉತ್ಪನ್ನಗಳನ್ನು ಡೆಲಿವರಿ ಮಾಡುವ ಆ್ಯಪ್‌ಗಳು ಇ- ಕಾಮರ್ಸ್ ಕಂಪನಿಗಳ ಮೂಲಕ ಜನರ ಮನೆ ಬಾಗಿಲಿಗೆ ನಂದಿನಿ ಇಡ್ಲಿ ಮತ್ತು ದೋಸೆ ಹಿಟ್ಟನ್ನು ತಲುಪಿಸಲು ಕೆಎಂಎಫ್ ಯೋಚಿಸಿದೆ. ನಂದಿನಿ ಉತ್ಪನ್ನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು. ಸಚಿವರುಗಳಾದ ಕೃಷ್ಣ ಭೈರೇಗೌಡ, ಕೆ.ವೆಂಕಟೇಶ್, ದಿನೇಶ್ ಗುಂಡೂರಾವ್, ಕೆ.ಎಂ.ಎಫ್ ಅಧ್ಯಕ್ಷ ಎಲ್.ಬಿ.ಪಿ. ಭೀಮಾನಾಯಕ್ ಮತ್ತಿತರರು ಚಿತ್ರದಲ್ಲಿದ್ದಾರೆ.

## SAHAKARA VARTHA PATRIKE

**Form IV (See rule-8)**

| | | | |
|---|---|---|---|
| 1. | Place of Publication | : | Bangalore, Karnataka |
| 2. | Periodicity of its Publications | : | Monthly |
| 3. | Printers Name | : | Biligiri Printers |
| | Whether Citizen of India | : | Yes |
| | If foreigner, State the country of origin Address | : | No.138, 2$^{nd}$ main, 8$^{th}$ cross, Chamaraj pet, Bangalore-560018 |
| 4. | Editors Name | : | Prajwal K.N |
| | Whether Citizen of India | : | Yes |
| | If foreigner, State the country of origin Address | : | No.126, 1$^{st}$ Main Road, 2$^{nd}$ cross, J.B. Kaval, Rajivgandhinagar, Nandini layout, Bangalore-560096 |
| 5. | Name and Address of Individuals who own The Newspaper and partners or share holders holding more than percent of the total capital | : | Karnataka state co operative credit societies Federation Ltd., No.126, 1$^{st}$ Main Road, 2$^{nd}$ cross, J.B. Kaval, Rajivgandhinagar, Nandini layout, Bangalore-560096 |

I Prajwal K.N hereby declare that the particulars given are true to the best of my knowledge

Sd/-


Bangalore

28-02-2025

**Prajwal/ K.N**

**Signature of the Publisher / Editor**

# ಸಹಕಾರ ಸುದ್ಧಿ




ಸಹಕಾರಿ ರತ್ನ ಚಂದ್ರ ಕೋಲ್ಚಾರ್ ಅಭಿನಂದನಾ ಸಮಿತಿ ಸುಳ್ಯ ಇದರ ಅಭಿನಂದನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರು ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿದ ಸಂದರ್ಭ.




ಸಹಕಾರಿ ರತ್ನ ಚಂದ್ರ ಕೋಲ್ಚಾರ್ ಅಭಿನಂದನಾ ಸಮಿತಿ. ಸುಳ್ಯ ಇದರ ಅಭಿನಂದನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರನ್ನು ಮಾಜಿ ಶಾಸಕರಾದ ಸಂಜೀವ ಮತ್ತಂಡೂರು ಮತ್ತು ನಿರ್ದೇಶಕರು ಚಂದ್ರ ಕೊಲ್ಚಾರು ಹಾಗೂ ಸುಳ್ಯ ತಾಲೂಕಿನ ಸಹಕಾರಿಗಳು ಅಭಿನಂದಿಸಿದರು.




ಸಹಕಾರಿ ರತ್ನ ಚಂದ್ರ ಕೋಲ್ಚಾರ್ ಅಭಿನಂದನಾ ಸಮಿತಿ. ಸುಳ್ಯ ಇದರ ಅಭಿನಂದನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಅಧ್ಯಕ್ಷರಾದ ಎಸ್. ಚಂದ್ರಶೇಖರ್‌ರವರು ಕೋಲ್ಚಾರ್ ದಂಪತಿಗಳಿಗೆ ಅಭಿನಂದಿಸಿ ಗೌರವಿಸಿದ ಸಂದರ್ಭ.